Regd. No. M 1299 ॥ सत्यान्नास्ति परो धर्मः ॥ ಬಿಡಿ ಸಂಚಿಕೆ ಒಂ ಪೈ.

ಸತ್ಯವಾದಿ

ವರ್ಷಕ್ಕೆ ರೂ. 1—0—0 ಸ್ಥಳಕ್ಕೆ (ಮೈಸೂರು ಅರಮನೆ ಪುರಸ್ಕೃತರಾದ ಎಂ. ವಿ. ಸುಬ್ಬರಾಯರಿಂದ ಪ್ರತಿಷ್ಠಿತವಾದುದು) ವರ್ಷಕ್ಕೆ ರೂ. 1—10—0 ಪರಸ್ಥಳಕ್ಕೆ

ಪ್ರತಿ ಬುಧವಾರ ಪ್ರಕಟಿಸಲ್ಪಡುವದು

ಸಂಪುಟ 19] ಮೈಸೂರು 9 ಸೆಪ್ಟೆಂಬರ್ 1936 ಸಂಚಿಕೆ 51

ಮೈಸೂರು ಎಸ್. ಎನ್. ಪಂಡಿತರ

ಬಿಳೀಹಲ್ಲುಪುಡಿ! ಕರೀಹಲ್ಲುಪುಡಿ! ಮೈಸೂರು ಟೂತ್‌ಪೇಸ್ಟ್!

ಬಿಳೀಹಲ್ಲುಪುಡಿ—ಇದರಲ್ಲಿ ಸಿಹಿ ಪುಡಿಯು ಸುವಾಸನೆ ಸುರುಚಿ ಇವುಗಳಿಂದ ಕೂಡಿ ಹಲ್ಲುಗಳನ್ನು ಶುಭ್ರವಾಗಿಡುತ್ತದೆ. ಉಪ್ಪಿನ ಪುಡಿಯು ರುಚಿಯೂಗಿಯೂ, ಆರೋಗ್ಯಕರವಾಗಿಯೂ ಇದೆ. ಪೊಟ್ಟಣ 1 ಕ್ಕೆ (ಸಿಹಿ ಉಪ್ಪು) 9 ಪೈ ; ಡಬ್ಬಿ 1 ಕ್ಕೆ (ಸಿಹಿ ಮತ್ತು ಉಪ್ಪು) 1 ಆಣೆ.

ಕರೀ ಹಲ್ಲುಪುಡಿ—ಇದನ್ನು ನಿತ್ಯವೂ ಉಪಯೋಗಿಸುವುದರಿಂದ, ಹಲ್ಲುಗಳ ಎಲ್ಲಾ ಕಾಯಿಲೆಗಳನ್ನೂ ಗುಣಮಾಡಿ ಪುನಃ ತೇಗಬಾರದಂತೆ ಅಡ್ಡಿಪಡಿಸುತ್ತದೆ. ಹಲ್ಲುಗಳ ಕೊಳೆಯನ್ನು ತೆಗೆದು ಬೆಳ್ಳಗೆ ಇಡುವುದರಲ್ಲಿ ಅದ್ವಿತೀಯವಾದ್ದು. ಟಿ 1/8 ಕ್ಕೆ 2 ಆಣೆ.

ಮೈಸೂರು ಟೂತ್‌ಪೇಸ್ಟ್—ಸೀಮೆಯಿಂದ ಬರುವ ಟೂತ್‌ಪೇಸ್ಟ್‌ಗಳಿಗಿಂತ ಗುಣ ಮುಂತಾದುವುಗಳಲ್ಲಿ ಕಡಮೆಯಾಗಿಲ್ಲ. ನಯ, ಹೊಳಪು, ಸುವಾಸನೆ, ರುಚಿ ಇವುಗಳಿಂದ ಕೂಡಿ ವಸಡುಗಳಿಗೆ ಬಲವನ್ನೂ, ಹಲ್ಲುಗಳಿಗೆ ಥಳಥಳ್ಳವನ್ನೂ ಉಂಟುಮಾಡುತ್ತದೆ. ಇದರ ಉಪಯೋಗದಿಂದ ಹಲ್ಲುಗಳನ್ನು ಹಾಳುಮಾಡತಕ್ಕ ಟಾರ್-ಟರ್ (ದಂತ ತರ್ಕುಳ) ಆಂಟು, ಹುಳು, ಮುಂತಾದವುನಾಶವಾಗುತ್ತವೆ. ಇದರಲ್ಲಿ ಎಲ್ಲಾ ಶಾಸ್ತ್ರೀಯ ಪದಾರ್ಥಗಳೇ ಸೇರಿರುತ್ತದೆ. ಇದನ್ನು ಬ್ರಷ್ ಅಥವಾ ಬೆರಳಿನಿಂದ ಉಪಯೋಗಿಸಬಹುದು. ಒಂದಾವರ್ತಿಪರೀಕ್ಷಿಸಿ ನೋಡಬೇಕಾದ್ದು. ಟಿ 1 ಕ್ಕೆ 5 ಆಣೆ.

[ಷರಾ:—ಮೇಲಿನ ಪುಡಿಗಳಲ್ಲಿ ಬತ್ತದಹೊಟ್ಟಸಬೂಗಿ, ಸೀಮೆಸುಣ್ಣ ಇವು ಸೇರಿಲ್ಲ. ನಕಲು ಮೂಲುಗಳಿಗೆ ಮೋಸಹೋಗಬೇಡಿ. ವ್ಯಾಪಾರಿಗಳಿಗೆ ಹೆಚ್ಚು ಕಮಿಷ್ ಕೊಡಲ್ಪಡುವುದು. ನಮ್ಮಲ್ಲಿ ಎಲ್ಲಾ ನಿದವಾದ ಆಯುರ್ವೇದೀಯ ಮಹೌಷಧಗಳೂ ತಯಾರಾಗುತ್ತವೆ. ಕ್ಯಾಟಲಾಗಿಗೆ ಬರೆಯಿರಿ]

ಪ್ರೊಪ್ರೈಟರ್ಸ್
ಎಸ್. ಎನ್. ಪಂಡಿತ್ ಅಂಡ್ ಸನ್ಸ್
Manufg Chemists Druggists & Physician

ಅಡ್ರೆಸ್
ದಿ ಮೈಸೂರು ಆಯುರ್ವೇದಿಕ್ ಫಾರ್ಮೆಸಿ
೯೦ ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

THE
Indian Naturopath

A Monthly Health Magazine, expounding the Philosophy of Naturism and the Several Systems of Nature Cure

Annual Subscription Rs. 1—8—0

A unique medium for Advertisements

For further particulars apply to—
The Editor "Indian Naturopath"
Bezwada.

H. S. KAMAL SHERIFF, DENTIST
Lansdowne Buildings, Mysore

We prepare artificial teeth with which any hard substance can be chewed. We Extract even the strongest teeth with the greatest aese. Stuffing the hollow tooth with gold and silver a speciality. Every work is done to entire satisfaction.

A Bank for Business

Constantly growing is the number of Leading Commercial and Industrial Concerns who use the service of this Bank.

These enterprises find that they are getting from this Bank a greatly specialised service by the careful personal attention of a staff experienced in the particular banking needs of their business.

Does Your Banking Service Need Improvement?
Let Any Of Our Branch Agents Talk With You.

THE QUILON BANK

(Incorporated in Travancore, 1919)

Head Office—QUILON

—BRANCHES—

Alleppey	Ernakulam	Madras	Shertallay
Allwaye	Erode	Madura	Tenkasi
Bangalore Cantt.	Hyderabad	Mount Road	Tinnevelly Jn.
Bangalore City	Jaffna	Mysore	Tinnevely Town
Chirayinkil	Kayamkulam	Nagarcoil	Trichinopoly
Cochin	Kandy	Quilon	Trivandrum
Coimbatore	Karaikudi	Royapettah	Tuiticorin
Coonoor	Kottayam	Secunderabad	Vellore

ರೂ. 15,000 ಇನಾಮು

ಎರಡೂ ಚೌಕುಗಳಿಗೆ ಪ್ರವೇಶ ಫಿ ರೂ. ೧ ಸ್ಪರ್ಧೆ ಸಂ. ೨

ಕೊನೆಯ ತಾ॥ ೧೬--೯--೬೬ ಉತ್ತರ ಪ್ರಸಿದ್ಧಿ ತಾ॥ ೨೨-೯-೬೬



ಮೊದಲಿನ ಚೌಕಿನಲ್ಲಿ ೧ ರಿಂದ ೪೯ ರ ವರೆಗೆ ಅಂಕಿಗಳನ್ನು ಉದ್ದ, ಅಡ್ಡ ಹಾಗೂ ಮೂಲೆಯ ಮೇಲಿನ ಜೀರೀಜು ೧೦೬ ಆಗುವಂತೆ ತುಂಬಿರಿ. ಆದರೆ ೪೯—೩೪ ಈ ಅಂಕಿಗಳನ್ನು ಹಾಗೆಯೇ ಇಡತಕ್ಕದ್ದು : ಒದಲಿಸಬಾರದು.



ಎರಡನೇ ಚೌಕಿನಲ್ಲಿ ೨೩ ಅಂಕಿಯನ್ನು ಕಾಯಮಾಗಿಟ್ಟು ಜೀರೀಜು ೪೮ ಆಗುವಂತೆ ೧ ರಿಂದ ೨೫ ರ ವರೆಗೆ ಅಂಕಿಗಳನ್ನು ತುಂಬಿರಿ.

ಎರಡೂ ಉತ್ತರಗಳಲ್ಲೂ ಒಂದು ಅಂಕಿಯನ್ನು ಒಂದೇ ಸಾರಿ ಉಪಯೋಗಿಸಬೇಕು.

ಎರಡು ಉತ್ತರಗಳಲ್ಲಿಯೂ ಒಂದು ಉತ್ತರವನ್ನು ಬಾಂಬೆ ಬುಲಿಯನ್ ಎಕ್ಸ್‌ಚೇಂಜ್ ಲಿಮಿಟೆಡ್ ಇವರಲ್ಲೂ, ಒಂದು ನಮ್ಮ ಆಫೀಸಿನಲ್ಲೂ ಮೊಹರು ಮಾಡಿ ಇಡಲಾಗಿದೆ. ಸ್ಪರ್ಧೆಯಲ್ಲಿ ಭಾಗ ವಹಿಸುವವರಿಗೆ ಸಂಶಯ ಬಂದಲ್ಲಿ ನಮ್ಮ ಆಫೀಸಿನಲ್ಲಿಯ ಉತ್ತರದ ಪಾಕೀಟಿನ ಮೇಲೆ ತಮ್ಮ ಸಹಿ ಅಥವಾ ಮೋಹರು ಮಾಡಬಹುದು. ಉತ್ತರಕ್ಕೆ ೧ ರೂಪಾಯಿನಂತೆ ಫೀ ಕಳಿಸಿ ಬೇಕಾದಷ್ಟು ಉತ್ತರಗಳನ್ನು ಕಳುಹಿಸಬಹುದು. ೧೬ ಕ್ಕಿಂತ ಹೆಚ್ಚು ಉತ್ತರಗಳನ್ನು ಕಳಿಸಿದಲ್ಲಿ ೧೬ ರ ಮೇಲಿನ ಪ್ರತಿಯೊಂದು ಉತ್ತರಕ್ಕೆ ೧೨ ಆಣೆ ಫೀ ತೆಗೆದುಕೊಳ್ಳಲಾಗುವುದು.

ಪ್ರವೇಶ ಫೀಯನ್ನು ಮನಿಯಾರ್ಡರ್, ಪೋಸ್ಟಲ್ ಆರ್ಡರ್ ಅಥವಾ ಸ್ಟಾಂಪು ಮುಖಾಂತರ ಕಳಿಸಬಹುದು. ಮನಿಯಾರ್ಡರ್ ಕೂಪನಿನಲ್ಲಿ ಪೂರ್ಣ ವಿಳಾಸವನ್ನು ಬರೆಯಬೇಕು. ಸ್ಥಳಿಕರಿಂದ ಬೆಳಿಗ್ಗೆ ೧೦ ಗಂಟೆಯಿಂದ ಸಾಯಂಕಾಲ ೬ ಗಂಟೆವರೆಗೆ ನಮ್ಮ ಕಚೇರಿಯಲ್ಲಿ ಉತ್ತರಗಳು ಸ್ವೀಕರಿಸಲ್ಪಡುವವು.

ಇನಾಮು—ಎರಡೂ ಚೌಕಗಳಲ್ಲಿಯ ನಮ್ಮ ಮೊಹರು ಮಾಡಿಟ್ಟ ಉತ್ತರಗಳಿಗೆ ಸಂಪೂರ್ಣವಾಗಿ ಸರಿಹೋಗುವ ಉತ್ತರಗಳಿಗೆ ಮೊದಲಿನ ೫ ಕ್ಕೆ ರೂಪಾಯಿ ೧೦೦೦ ರಂತೆ, ಮುಂದಿನ ೫ ಕ್ಕೆ ರೂಪಾಯಿ ೯೦೦ ರಂತೆ, ಉಳಿದವುಗಳಿಗೆ ರೂಪಾಯಿ ೬೦೦ ರಂತೆ ಇನಾಮುಗಳು ಕೊಡಲ್ಪಡುವವು.

ಮೊದಲನೇ ಚೌಕೆದಲ್ಲಿ ಉತ್ತರ ಸರಿಯಿದ್ದವರಿಗೆ

ಮೊದಲಿನ ೫ ಜನರಿಗೆ	ಮುಂದಿನ ೫ ಜನರಿಗೆ	ಉಳಿದವರಿಗೆ
ರೂ. ೯೦೦	ರೂ. ೬೦೦	ರೂ. ೨೦೦

ಎರಡನೇ ಚೌಕಿನಲ್ಲಿಯ ಉತ್ತರ ಸರಿಯಾಗಿದ್ದವರಿಗೆ

ಮೊದಲಿನ ೫ ಜನರಿಗೆ	ಮುಂದಿನ ೫ ಜನರಿಗೆ	ಉಳಿದವರಿಗೆ
ರೂ. ೬೫	ರೂ. ೫೦	ರೂ. ೨೫

ಎಂಥ ಸಂದರ್ಭದಲ್ಲಿಯೂ ಇನಾಮಿನ ಹಣದಲ್ಲಿ ಕಡಿಮೆ ಮಾಡಲಾಗುವದಿಲ್ಲ. ಉತ್ತರ ಬೇಕಾದವರು ವಿಳಾಸವನ್ನು ಒರೆದು ಲಕ್ಕೋಟನ್ನು ಕಳಿಸಬೇಕು. ಮ್ಯಾನೇಜರರ ನಿರ್ಣಯವು ಕೊನೆಯದೂ, ಕಾಯಿದೆಯಿಂದ ಬಂಧನಕಾರಕವಾದದ್ದೂ ಇರುತ್ತದೆ.

ವಿಶೇಷ ಸೂಚನೆ—ವೃತ್ತಪತ್ರಿಕೆಗಳಲ್ಲಿ ಜಾಹೀರಾತು ಕೊಡಲಿಚ್ಛಿಸುವವರು, ಜಾಹೀರಾತು ಬೇಕಾದ ವೃತ್ತಪತ್ರಿಕೆಗಳೂ ನಮಗೆ ಬರೆಯಬೇಕು.

ಚಿನ್ನ, ಬೆಳ್ಳಿ, ಅರಳೆ, ಬಟ್ಟೆ ಮುಂತಾದವುಗಳು ತಯಾರಾದ ಇಲವೆ ಕಳುಹಿಸುವ ವ್ಯಾಪಾರವನ್ನು ಹಿಂದೂಸ್ಥಾನದ ಅಥವಾ ಪರದೇಶಗಳ ಸಂಗಡ ಯೋಗ್ಯಡಿಪಾಜಟ್ಟು ಇಟ್ಟುಕೊಂಡು ದಲಾಲಿ ಮೇಲೆ ಮಾಡಿಸಿ ಕೊಡುವೆವು.

Manager- Indo Foreign Commercial Service,
121 Kika Street, Bombay 4.

ಒಂದು ಶ್ರಾವಣಿಕ ಕಥೆ

ಅತಿಥಿ

ನಮ್ಮ ಮನೆಯ ಪವಿತ್ರತೆಯನ್ನು ಅನುಭವಿಸುವುದಕ್ಕೆ ಅತಿಥಿಯೊಬ್ಬನು ಬರುತ್ತೀನೆಂದು ಬೆದರಿಸಿದ್ದನು. ನನಗೆ ಇಷ್ಟವಿದ್ದಿತೋ ಇಲ್ಲವೋ ನಾನು ಸ್ಟೇಷನ್ನಿಗೆ ಹೋಗಿ ಆಗಂತುಕನ್ನು ಕರೆತರಬೇಕಾಗಿದ್ದಿತು.

ಅತಿಥಿಯೆಂದು ನಾನು ಹೇಳಿದೆನಲ್ಲಾ, ಹಾಗೆಂದರೆ ಹಿಂದೂ ದೇಶದ ಸಂಪ್ರದಾಯದ ರಂತಹ ಪ್ರಾಣಿಯೆಂದು ನನ್ನ ಅರ್ಥ. ನನ್ನ ಅನುಭವದಲ್ಲಿ ಇದು ಸತ್ಯವೆಂದು ತಿಳಿದುಕೊಂಡಿದ್ದೇನೆ. ರಾಜ ಮಹಾರಾಜರುಗಳ ಅಮೃತಾವತಿಗಳನ್ನೂ ಸ್ವರ್ಗ ವಿಹಾರಗಳನ್ನೂ ನೋಡಿದ್ದೇನೆಂದು ಒಂದು ಹೇಳಿಕೊಳ್ಳುವ ಇಂತ ಅತಿಥಿಯನ್ನು ಯಾವ ಮನುಷ್ಯನಾಗಲೀ ಸಂತೋಷಗೊಳಿಸಲಾರನು. ಹಿಟ್ಲರರೂ ಘುಸಲೋನಿಗಳೂ ಏಕೆ ಇವನ ಮುಂದೆ? ಈ ಸಾಮ್ಯವೇ ತಪ್ಪು.

ನಿರೀಕ್ಷಿತನಾದ ಪ್ರಾಣಿಯು ಆ ಗಾಡಿಯಲ್ಲಿ ಬರಲಿಲ್ಲ. ನಾನು ದೇವರನ್ನು ಈ ಕರುಣೆಗಾಗಿ ಮನಸ್ಸಿನಲ್ಲೇ ಕೊಂಡಾಡಿದೆನು. ಅತಿಥಿಯು ಬರದಿದ್ದುದನ್ನು ನೆನೆದು ನೆನೆದು ನನಗೆ ಆನಂದವಾಗಿದ್ದಿತು! ಆದರೆ ಈ ಹುಮ್ಮಸದಲ್ಲಿ ತುಂಬಾ ಕಾಲವನ್ನು ಕಳೆದುಬಿಟ್ಟಿದ್ದೆನು. ನಿರೀಕ್ಷಣೆಯಲ್ಲೇ!

ಈ ಹಾಳು ಅತಿಥಿಗಳೆಂಬ ಅತ್ಯಮೋಘವಾದ ಪ್ರಾಣಿಗಳನ್ನೆಲ್ಲಾ ಏನಾದರೂ ಮಾಡಿ ಒಂದರಮೇಲೊಂದನ್ನಾಗಿ ಜೋಡಿಸಿದುದೇ ಆದರೆ ನಿಜವಾಗಿ ಸ್ವರ್ಗಕ್ಕೆ ಸಮಗವಾದ ಮಾರ್ಗವೇ ಆಗುತ್ತೆ, ಸಂದೇಹವೇ ಇಲ್ಲ. ನನಗೂ, ಯೋಚಿಸಿ ಯೋಚಿಸಿ ಸಾಕಾಗಿದೆ. ನೋಡಿ, ಹೀಗೆ ಒಬ್ಬರ ಮನೆ ಪವಿತ್ರತೆಯನ್ನು ಬಲಾತ್ಕಾರದಿಂದ ಅನುಭವಿಸುವುದಕ್ಕೆ ಬರುವ ಈ ಅತಿಥಿ ವರ್ಗದವರಿಗೆ ಕ್ರಿಮಿನಲ್ ಪ್ರೊಸೀಜರ್ ಕೋಡಿನ ಪ್ರಕಾರ ಶಿಕ್ಷಿಸಬೇಕಾಗಿದೆ. ಇಲ್ಲದೆ ಹೋದರೆ ಸುಮ್ಮನೆ ಪೀಡಿಸುವ ಈ ಅತಿಥಿ ಪ್ರವಾಹಕ್ಕೆ ತಡೆಯೇ ಇಲ್ಲದಂತಾಗುತ್ತದೆ.

ಹೋಗಲಿ ಇದು. ನಾನು ಸ್ಟೇಷನ್ನಿನಲ್ಲಿ ಇನ್ನು ಕೆಲವು ತಪಾಷೆಗಳನ್ನು ನೋಡಬೇಕಾಯಿತು. ಗೇಟಿನ ಒಳಿ ಟಿಕೆಟ್ ಕಲೆಕ್ಟರನು ವ್ಯಕ್ತಿಯೊಬ್ಬನನ್ನು ಟಿಕೆಟ್ ಕೇಳುತ್ತಿದ್ದನು.

ವ್ಯಕ್ತಿ—ನಿಮಗೆ ಇಂಗ್ಲೀಷ್ ಬರುತ್ತದೆಯೆ?

ಟಿ. ಕ. —ಟಿಕೆಟ್ ಎಲ್ಲಿ ನಿನ್ನದು? (ಸ್ವಭಾಷೆಯಲ್ಲಿ)

ಏನು ನೀನು ಕೇಳುವುದು. ಟಿಕೆಟ್! ಯಾರಯ್ಯಾ ರೈಲಿನಿಂದ ಬಂದಿರುವರು. ಟಿಕೆಟ್ ಕೇಳುವುದಕ್ಕೆ ನೀನು?

ರೈಲಿನಿಂದ ಇಳಿದಿರಬೇಕಾದ ಅವಶ್ಯಕತೆ ಇಲ್ಲ ಟಿಕೆಟ್ಟಿಗೆ.

ಹಾಗಾದರೆ ನ್ಯಾಯಸ್ಕಾರ ಏನು ಅವಶ್ಯಕ? ಹೇಳು.

ಏನೇನೋ ಕೇಳಬೇಡಯ್ಯಾ ಇಲ್ಲ. ಟಿಕೆಟ್ ಕೊಡು.

ಅಯ್ಯಾ ನೀನೆಲ್ಲೊ ನನ್ನನ್ನು ಬೇರೆಯವರೆಂದು ತಪ್ಪು ತಿಳಿದುಕೊಂಡ್ಯು ಬಿಟ್ಟಿದ್ದೀಯೆ. ನಾನೊಂದೂ ಕಾಣದ ಸಭ್ಯಗೃಹಸ್ಥ. ನ್ಯಾಯದಿಂದ ಇರುವ ನನ್ನಂಥವನಿಂದ ನೀನು ಟಿಕೆಟ್ ಕೇಳುವುದು ಆಶ್ಚರ್ಯಕರವಾಗಿದೆ.

ಇಲ್ಲಿನ ರೂಲ್ಸ್ ಪ್ರಕಾರ ಪತ್ರಿಯೊಬ್ಬ ಸಭ್ಯಗೃಹಸ್ಥನೂ ಟಿಕೆಟ್ಟನ್ನು ಕೊಂಡುಕೊಂಡೇ ಒಳಕ್ಕೆ ಒರಬೇಕು. ನಿನ್ನಲ್ಲಿ ಟಿಕೆಟ್ಟು ಇಲ್ಲ. ಡಬ್ಬಲ್ ಛಾರ್ಜನ್ನು ಕೊಟ್ಟು ಸುಮ್ಮನೆ ಹೋಗು, ಹೆಚ್ಚು ಮಾತಾಡಬೇಡ.

ಅಯ್ಯಾ, ಸ್ವಾಮಿ, ನಿಮ್ಮ ರೂಲ್ಸ್ ನನಗೆ ಗೊತ್ತಿಲ್ಲ. ನಾನು ವಕೀಲನೂ ಅಲ್ಲ. ನೋಡಿದಿರಾ ಹೋಗಲಿ, ಕೊಟ್ಟು ಬಿಡೋಣವೆಂದರೆ ನನ್ನಲ್ಲಿ ಒಂದು ಬಿಡಿಕಾಸೂ ಇಲ್ಲ. ನೀವೇ ದೊಡ್ಡಮನಸ್ಸು ಮಾಡಿ ಈಗ ಕೊಟ್ಟುಬಿಡಿ, ಆಮೇಲೆ ನನ್ನಿಂದ ನನ್ನ ಅನುಕೂಲವನ್ನು ನೋಡಿ ತೆಗೆದುಕ್ಕೊಳ್ಳುವಿರಂತೆ.

(ಟಿಕೆಟ್ ಕಲೆಕ್ಟರಿಗೆ ತಾಳ್ಮೆಯಿಲ್ಲದೆ) ನಿನ್ನನ್ನು ಪೋಲೀಸರಿಗೆ ಕೊಟ್ಟು ಬಿಡುತ್ತೇನೆ (ಎಂದು ಕೂಗಿದನು)

ಅಷ್ಟಾದರೆ ಆಗಿಹೋಯಿತೆ. ನಿಮಗೆ ಹಣವೊಂದಂತಾಗುತ್ತದೆಯೇ (ಒಂದೆರಡು ನಿಮಿಷಗಳನಂತರ) ಹೋಗಲೀ ಈ ರೈಲು ಯಾರಿಗೆ ಸೇರಿದ್ದೊ ಸ್ವಲ್ಪ ಅಪ್ಪಣೆ ಕೊಡ್ತೀರಾ?

ಸರ್ಕಾರಕ್ಕೆ ಸೇರಿದ್ದು ರೈಲು. ಅದರಲಿ, ಮುಚ್ಚು ಜಾಯಿ, ಹಣ ತೆಗಿ ಹೊರಕ್ಕೆ.

[ಮುಂದುವರಿಯ ವುದು.

'Satyavadi' Missing Letters Competition 3

WIN Rs. 100

Key Solution Deposited With The Quilon Bank Ltd., Mysore.

Last day of Entry	Entrance Fee for each Entry	Result on
25—9—36	4 Annas	30—9—36

ರೂ. 100 ಬಹುಮಾನ

ಪ್ರವೇಶದನ ನಾಲ್ಕಾಣೆ ಮಾತ್ರ

ಒಂದನೆಯ ಬಹುಮಾನ ೫೦ ರೂಪಾಯಿ ಎರಡನೆಯ ಬಹುಮಾನ ೨೫ ರೂಪಾಯಿ
ಮೂರನೆಯ ಬಹುಮಾನ ೧೫ „ ಸ್ಪೆಷಲ್ ಬಹುಮಾನ ೧೦ „

ಮೊದಲನೆಯ ಸರಿಯಾದ ಉತ್ತರಕ್ಕೆ ೧೦ ರೂ. ಬಾಳುವ ಬೆಳ್ಳಿಯ ಬಟ್ಟಲು !

ಕೆಳಗೆ ಕೊಟ್ಟಿರುವ ಐದು ಪದಗಳಲ್ಲಿ ಬಿಟ್ಟಿರುವ ಅಕ್ಷರಗಳನ್ನ ಜೋಡಿಸಬೇಕು.

ನಮ್ಮ ಉತ್ತರವನ್ನು ಮೈಸೂರಿನಲ್ಲಿರುವ ಕ್ವಿಲೊನ್ ಬ್ಯಾಂಕಿನಲ್ಲಿಟ್ಟಿರುವೆವು.

ಈ ಫಾರಂನಲ್ಲಿ ಅಥವಾ ಬೇರೆ ಕಾಗದದಲ್ಲಿ ಉತ್ತರವನ್ನೂ, ಹೆಸರು ವಿಳಾಸವನ್ನೂ ಸ್ಪಷ್ಟವಾಗಿ ಬರೆದು ಕಳುಹಿಸಬೇಕು.

	ಜೋಡಿಸಬೇಕಾದ ಪದಗಳು	ಸೂಚನೆ
1	ಅ —	ಪ್ರಿಯ ಬಂಧು
2	— ಪ್ಪು	ಆಹಾರ ಪದಾರ್ಥ
3	— ಂಗಳೂರು	ದಕ್ಷಿಣ ಇಂಡಿಯಾದ ಪ್ರಸಿದ್ಧ ಪಟ್ಟಣ
4	— ಲ	ಮಾವದ ಹೆಸರು
5	— ಣ್ಣ	ಮನೆಯ ಅಲಂಕಾರಕ್ಕೆ ಬೇಕಾದ್ದು

ಹೆಸರು.....

ವಿಳಾಸ.....

ನಿಯಮಗಳು

ಪತ್ಯದಲ್ಲಿ ಕೊಟ್ಟಿರುವ ಫಾರಂನಲ್ಲಾಗಲೀ ಅಥವಾ ಬೇರೆ ಸಾಧಾರಣ ಕಾಗದದಲ್ಲಾಗಲೀ ಉತ್ತರವನ್ನೂ ಹೆಸರು ವಿಳಾಸಗಳನ್ನೂ ಸ್ಪಷ್ಟವಾಗಿ ಬರೆದು ಕಳುಹಿಸಬೇಕು. ಪ್ರತಿ ಉತ್ತರಕ್ಕೂ ಪ್ರವೇಶ ಧನಕ್ಕಾಗಿ 4 ಒಂದೊಂದಾಣೆ ಪೋಸ್ಟೇಜ್ ಸ್ಟ್ಯಾಂಪು ಕಳುಹಿಸಬೇಕು.

ಉತ್ತರವನ್ನು 1936 ನೇ ಸೆಪ್ಟೆಂಬರ್ 25 ನೇ ತಾರೀಖಿನೊಳಗೆ ತಲುಪುವಂತೆ ಕಳುಹಿಸಬೇಕು. ಆ ತಾರೀಖಿನ ಅನಂತರ ಬರತಕ್ಕ ಉತ್ತರಗಳನ್ನು ಗಣನೆಗೆ ತರುವುದಿಲ್ಲ. ಬೇಕಾದವರು ನಮ್ಮ ಆಫೀಸಿಗೆ ಆ ತಾರೀಖಿನೊಳಗೆ ತಂದುಕೊಡಬಹುದು.

50 ರೂ. ಗಳ ಮೊದಲನೇ ಬಹುಮಾನವು ಒಂದು ತಪ್ಪೂ ಇಲ್ಲದ ಉತ್ತರಕ್ಕೂ, 25 ರೂ. ಗಳ ಎರಡನೇ ಬಹುಮಾನವು ಒಂದು ತಪ್ಪಿರುವ ಉತ್ತರಕ್ಕೂ, 15 ರೂ. ಗಳ ಮೂರನೇ ಬಹುಮಾನವು ಎರಡು ತಪ್ಪಿರುವ ಉತ್ತರಕ್ಕೂ ಕೊಡಲಾಗುವುವು. ಮತ್ತು 10 ರೂ. ಬಾಳುವ ಬೆಳ್ಳಿಯ ಬಟ್ಟಲು ಮೊಟ್ಟಮೊದಲು ನಮ್ಮ ಕೈ ಸೇರುವ ಸರಿಯಾದ ಉತ್ತರವನ್ನು ಕಳುಹಿಸಿದವರಿಗೆ ಸ್ಪೆಷಲ್ ಬಹುಮಾನವಾಗಿ ಕೊಡಲಾಗುವುದು.

"ಮೈಸೂರಿನಲ್ಲಿರುವ ಕ್ವಿಲೊನ್ ಬ್ಯಾಂಕಿನಲ್ಲಿ ಇಟ್ಟಿರುವ ಉತ್ತರಕ್ಕೆ ಸರಿ ಹೋಲುವ ಉತ್ತರವೇ ಮೊದಲನೇ ಬಹುಮಾನಕ್ಕೆ ಅರ್ಹವಾದುದು. ಬಹುಮಾನಗಳಿಗೆ ಅರ್ಹವಾದ ಉತ್ತರಗಳು ಅನೇಕರಿಂದ ಬಂದಲ್ಲಿ ಬಹುಮಾನಗಳು ಅವರುಗಳಿಗೆ ಭಾಗಮಾಡಿ ಹಂಚಲಾಗುವುದು. ಉಮೇದುವಾರರ ಸಂಖ್ಯೆಗೆ ಅನುಗುಣವಾಗಿ ಬಹುಮಾನದ ಹಣವೂ ಹೆಚ್ಚು ಕಡಿಮೆ ಮಾಡಲಾಗುತ್ತದೆ.

ಬ್ಯಾಂಕಿನಲ್ಲಿ 'ಸೀಲ್' ಮಾಡಿ ಇಟ್ಟಿರುವ ಉತ್ತರವೂ ಬಹುಮಾನ ಪಡೆದವರ ಹೆಸರುಗಳೂ ಸಹ 1936 ನೇ ಸೆಪ್ಟೆಂಬರ್ 30 ನೇ ತಾರೀಖಿನ ಸತ್ಯವಾದಿ ವಾರಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

ಈ ಸ್ಪರ್ಧೆಯ ವಿಚಾರವಾಗಿ ಯಾವ ವಿಧವಾದ ಪತ್ರವ್ಯವಹಾರವಾಗಲೀ ಅಥವಾ ಸ್ಪರ್ಧೆಯ ಅಧಿಕಾರಿಗಳೂಡನೆ ಭೇಟಿಯನ್ನಾಗಲೀ ಮಾಡಲಾಗುವುದಿಲ್ಲ.

ಸ್ಪರ್ಧೆಯ ಸಕಲ ವಿಷಯಗಳಲ್ಲೂ ಸಂಪಾದಕರ ತೀರ್ಮಾನವೇ ಕೊನೆ. ಉಮೇದುವಾರರೆಲ್ಲರೂ ಇವರ ತೀರ್ಮಾನಕ್ಕೆ ಬದ್ಧರಾಗಿರಬೇಕು.

ಉತ್ತರಗಳನ್ನು ಕಳುಹಿಸುವ ವಿಳಾಸ—

ಸಂಪಾದಕ, "ಸತ್ಯವಾದಿ ಸ್ಪರ್ಧೆ ಶಾಖೆ"
ಚಾಮರಾಜಪುರಂ, ಮೈಸೂರು.

Weekly Newspaper

SATYAVADI

Every Wednesday

MYSORE (Founded 1917) 9—9—36

A GOLDEN CHANCE To WIN A FORTUNE In OUR

3rd Annual Special Competition No. 17.

Ist PRIZE: Rs. 30,000 For the BEST ATTEMPT	RS. 50,000 GUARANTEED BONUSES	For RUNNERS UP Rs. 20,000 As 2nd, 3rd & 4th Prizes & Bonuses

Rs 750 for 1st and Rs 100 for the subsequent all Correct entries
Rs 35 for one error and Fountain Pens for two error entries

Entrance Fee Re 1 per entry. Rs. 5 only for EIGHT entries from the SAME Competitor.

ENTRIES CLOSE ON 19th OCTOBER.

1 PERS / YES	2 T SPO / YES	3 B / Y
2 I / IC	5 D G / G . D	6 TH / S
7 H. M.	8 C / WAY	9 J S
10 P / S	11 M / KEY	12 A.M.
13 S / NET	14 LEM / S	15 W

LIST. 1. After Noon. 2. Bony. 3. Bowery. 4. Convey. 5. Dong and Gond. 6 Hail Mary. 7. His Majesty 8. Ionic 9. Jason. 10. Johnson. 11. Lemons. 12. Monkey. 13. One. 14. Pawns. 15. Persons. 16 Powers. 17. Sonnet. 18. Sunderth. 19. Teaspoons. 20. Thorns. 21. Way under sea. 22. Won.

Instructions:— In Puzzle No. 1. PERS is given on YES; and YES is phonetically equal to S. PERS is on S. i.e. **Pers** on S=**Persons.** and hence the solution to puzzle No. 1. is **Persons.** All the correct solutions either as spelt or pronounced phonetically or otherwise are given in the above **List** and all you have to do is to pick up the suitable ones. Enter your answers on any good paper and forward to reach us on or before **19th. October 1936.**

Rules:— (1) **Any number** of entries may be submitted by the **same** competitor in the same envelope, provided each entry of fifteen solutions be accompanied by Re. **One.** (Rs. **Five** only for **Eight** entries from the **same** competitor) per money order or crossed Indian Postal order. (2) Enclose the m. o. receipt or postal order, and a stamped addressed cover with your entries. (3) Write on the outside of your envelope (a) your name and address, (b) the number of entries enclosed and (c) the name of the Newspaper in which you saw this advertisement. **Other Rules,** as to the Proprietor's decision; 'distribution of prizes,' 'no correspondence' &c. as usual. **The Key Solution** lodged with **The V. L. Bank Ltd.,** and the **results** will be published in **the Hindu** on **1st. November 1936.** Address entries & Money orders to:—

THE ALL INDIA COMPETITION No. 17, Puthupally, Kottayam, Travancore.

ಅರುಣೋದಯದ

ವಿಜಯನಗರಸಾಮ್ರಾಜ್ಯ ಸಂಪಕೆಯು

ಅಖಿಲ ಕರ್ನಾಟಕದೊಳಗಿನ ವಿಖ್ಯಾತ ಸಾಹಿತಿಗಳಿಂದ ಬರೆಯಲ್ಪಟ್ಟ ವಿದ್ವತ್ತಾಪ್ರಚುರವಾದ ಲೇಖನಗಳಿಂದ ಕೂಡಿದ ಮತ್ತು ವಿವಿಧ ವಿಜಯನಗರ ಸಾಮ್ರಾಜ್ಯದ ವೈಭವವನ್ನು ವ್ಯಕ್ತಪಡಿಸುವ ಅನೇಕ ಅಂದವಾದ ಚಿತ್ರಗಳನ್ನೊಳಗೊಂಡ, ಬರಹಗಾರರ ಅಲ್ಪ ಪರಿಚಯ ಹಾಗು ಭಾವಚಿತ್ರಗಳಿಂದಲೂ ಶೋಭಿಸುವ ಅತ್ಯಂತ ಮಹತ್ವಪೂರ್ಣವಾದ ಹಾಗೂ ಕನ್ನಡಿಗರಿಗೆ ಅತ್ಯಂತ ಅಭಿಮಾನದ ವಿಷಯವಾಗಿರುವ ಜಯಕರ್ನಾಟಕದ ಆಕಾರದ ೨೫೦—೩೫೦ ಪುಟಗಳನ್ನು ಮಿಕ್ಕಿ ಹೊರಡುತ್ತಿರುವ ಪೆಬ್ಬೊಟ್ಟಿಗೆಯ ಬೆಲೆಯು ಕೇವಲ ೨ ರೂಪಾಯಿ ಮ್ಯಾನೇಜರ,

ಅರುಣೋದಯ, ಬೆಳಗಾಮಿ.

ವಿದ್ಯಾಭಿವರ್ಧನಿ

(ಕನ್ನಡಪಕ್ಷಪತ್ರಿಕೆ)

ಸಂಪಾದಕರು—ಇ. ಸುಬ್ಬಕೃಷ್ಣಯ್ಯನವರು.

ಶಿಕ್ಷಣ, ಸಾಮಾಜಿಕ ಸುಧಾರಣೆ, ರಾಜಕೀಯ ಸಮಸ್ಯೆಗಳು ಸ್ವಾರಸ್ಯವಾದ ವಾರ್ತೆಗಳು..... ವಿವಿಧ ಲೇಖಗಳು ಇವುಗಳಿಂದ ರಂಜಿಸುತ್ತಿರುವ ನೂತನ ಪಕ್ಷ ಪತ್ರಿಕೆ.

೧೬ ಪುಟತುಂಬ ಓದತಕ್ಕ ವಿಷಯಗಳಿರುವ ಈ ಪತ್ರಿಕೆಯ ಬೆಲೆ ಭಿಡಿ ಸಂಚಿಕೆಗೆ ೧ ಆಣೆ. ವಾರ್ಷಿಕ ಚಂದಾ ೧|| ರೂಪಾಯಿ. ಎಲಿಮೆಂಟರಿ ಅಧ್ಯಾಪಕರಿಗೂ ೧ ರೂಪಾಯಿ.

ಮೇನೇಜರ್ ವಿದ್ಯಾಭಿವರ್ಧನಿ,
ಕಂಕನಾಡಿ, ಮಂಗಳೂರು.

Oriental Pharmacy

General Hospital Road MYSORE

for Best Unani Medicines

ನಿಮಗೆ ಅದೃಷ್ಟವೆನ್ನು ತಿಳಿದುಕೊಳ್ಳಬೇಕೆಂಬ ಅಪೇಕ್ಷೆಯಿದ್ದರೆ ಕೆಳಗಿನ ವಿಳಾಸಕ್ಕೆ ಬರೆಯುರಿ ಅವರು ಹೇಳುವ ಫಲವನ್ನು ಕೇಳಿ ಅನೇಕರು ಮುಗ್ಧರಾಗಿ ಹೋಗಿದ್ದಾರೆ. ತೃಪ್ತಿಕರವಾಗಿ ಹೇಳುತ್ತಾರೆ.

ವಿಳಾಸ :— **ರಾಜಕ ಜ್ಯೋತಿಷ್ಯರು,**

೧೦೬೮, ಚಾಮರಾಜ ಅಗ್ರಹಾರ, ಮೈಸೂರು.

Edited, Printed & Published by M. S. Krishna Rao, at the Satyavadi Press, Satyavadi Buildings, Chamaraj Agrahar, Mysore

ಸತ್ಯವಾದಿ

ಮುನಿಸಿಪಾಲಿಟಿಯು ಗಮನಕ್ಕೆ

ಮೈಸೂರು ಸಿಟಿ ಕೆಲ್ಲೇ ಮೊಹಲ್ಲಾ ನಿವಾಸಿಗಳಾದ ಮ|| ರಂಗಣ್ಣ ಮತ್ತು ಟಿ. ಎಸ್. ಸುಬ್ಬಣ್ಣ ಎಂಬುವರು ಮೈಸೂರು ಸಿಟಿ ಮುನಿಸಿಪಾಲಿಟಿಯವರ ಲೋಪದೋಷಗಳನ್ನು 'ನಗರ ನಿವಾಸಿಗಳ ಕುಂದು ಕೊರತೆಗಳು' ಎಂಬ ಹಸ್ತೆಪತ್ರಿಕೆಯ ಮೂಲಕವೂ ಸಾಧ್ಯ ಪತ್ರಿಕೆಯ ಮೂಲಕವೂ ಪ್ರಸಿದ್ಧಪಡಿಸಿದರು. ಸದರಿ ತೇಖನದಲ್ಲಿ ವ ಮುನಿಸಿಪಾಲಿಟಿಯವರು ಲೈಸೆನ್ಸು ಗಳ ಕಾರಣದಿಂದಲೂ ಫ್ಲಷಿಂಗ್ ಕಕ್ಕಸುಗಳೆಂಬ ಕಾರಣದಿಂದಲೂ ಸಭ್ಯ ನಿವಾಸಿಗಳಿಗೆ ಅನೇಕ ಎಂಸೆಗಳನ್ನು ಕೊಡುತ್ತಿದ್ದಾರೆಂದೂ, ಇದಕ್ಕಿಂತಲೂ ಹೆಚ್ಚಾಗಿ ಮುನಿಸಿಪಾಲಿಟಿಯವರು ಶ್ರದ್ಧೆಯಿಂದ ನೆರವೇರಿಸಬೇಕಾಗಿರುವ ಅನೇಕ ಸಾರ್ವಜನಿಕ ಆರೋಗ್ಯಕರ ಕಾರ್ಯಗಳ ಕಡೆಗೆ ಅಲಕ್ಷ್ಯಮಾಡಿದ್ದಾರೆಂದೂ ಕೆಲವು ನಿದರ್ಶನಗಳ ಸಮೇತ ನಿರೂಪಿಸಿದ್ದಾರೆ.

ಇಷ್ಟು ಜವಾಬ್ದಾರಿಯಿಂದ ಬಹಿರಂಗವಾದ ಮೇಲೆ ಅಧಿಕಾರಿಗಳು ಸ್ವಲ್ಪ ಗಮನಕ್ಕೆ ತೆಗೆದುಕೊಳ್ಳುವುದು ಅನೇಕ ಕಡೆ ರೂಢಿಗೆ ಬಂದಿರುತ್ತೆ. ವೇಲ್ಯಂಡ ವಿಷಯವು ಮುನಿಸಿಪಲ್ ಪ್ರೆಸಿಡೆಂಟರ ಗಮನಕ್ಕೆ ಬಿದ್ದುದು ಅಭಿನಂದನೀಯವಾದುದೇ. ಈ ವಿಷಯವನ್ನು ವಿಮರ್ಶಿಸಿ ಮುನಿಸಿಪಾಲಿಟಿಯು ಪರವಾಗಿ ದೀರ್ಘವಾದ ಒಂದು ಸಮಾಧಾನವನ್ನು ಅವರು ನಮಗೆ ಕಳುಹಿಸಿರುವುದಕ್ಕಾಗಿ ನಾವು ಅವರನ್ನು ವಂದಿಸುತ್ತೇವೆ.

ಆದರಲ್ಲಿ ಅನೇಕ ಮುನಿಸಿಪಾಲಿಟಿಯವರು ಪ್ರಜೆಗಳ ಸೌಕರ್ಯಕ್ಕಾಗಿ ಎಷ್ಟೆಷ್ಟು ಧನವನ ಸಹಾಯವನ್ನು ಕೊಡುತ್ತಿದ್ದಾರೆಂಬುದನ್ನು ತಿಳಿಯಪಡಿಸಿರುವುದಲ್ಲದೆ ನಗರ ನಿವಾಸಿಗಳು ತಮ್ಮ ಸೌಕರ್ಯಕ್ಕಾಗಿ ಮಾಡಿರುವ ಏರ್ಪಾಡುಗಳಲ್ಲಿ ಅಧಿಕಾರವರ್ಗದೊಡನೆ ಏಕೀಭವಿಸಿ ಉಪಯೋಗಿಸಿಕೊಳ್ಳುವುದು ಪರಿವರ್ತನೆಯೆಂದೂ ಪ್ರಾರ್ಥಿಸಿರುವುದು ಸಹಜವಾದುದೇ ಆಗಿದೆ. ಅಧಿಕಾರಿಗಳ ಸೂಚನೆಗಳನ್ನು ಸ್ವಲ್ಪವೂ ಗಮನಕ್ಕೆ ತಂದುಕೊಳ್ಳದೆ ತಮಗಿರುವ ಕಷ್ಟಸುಖಗಳನ್ನೂ ತಿಳಿಯಪಡಿಸದೆ ವೃಥಾ ಕಾಲಯಾಪನೆ ಮಾಡಿದವರ ಮೇಲೆ ಮಾತ್ರ ಕೋರ್ಟಿನಲ್ಲಿ ಫಿರ್ಯಾದನ್ನು ದಾಖಲಮಾಡಲಾಯಿತೆಂದೂ, ಅವುಗಳಲ್ಲೂ ಸೂಚೀಕರು ತಮ್ಮ ಕಷ್ಟಸುಖಗಳನ್ನು ಹೇಳಿಕೊಂಡು ಸಹಾಯವನ್ನಪೇಕ್ಷಿಸಿದ ಸಂದರ್ಭಗಳಲ್ಲಿ ಅಗತ್ಯವಾಗಿ ತಕ್ಕ ಏರ್ಪಾಡುಗಳನ್ನು ಮಾಡಲಾಯಿತೆಂದೂ, ಇದನ್ನು ನಿರಾಕರಿಸಿ ನಡೆದ ಮೂರು ಸಂದರ್ಭಗಳಲ್ಲಿ ಮಾತ್ರ ಶಿಕ್ಷಾಕ್ರಮವು ಜರುಗಿಸಲಾಯಿತೆಂದೂ ತಿಳಿಸಿದ್ದಾರೆ.

ಆರೋಗ್ಯ ಪಾಕೀಜು ನಿಯಮಗಳೆಲ್ಲಾ ಪ್ರಜಾ ಸೌಕರ್ಯಕ್ಕಾಗಿ ಲಕ್ಷಾಂತರ ರೂಪಾಯಿ ವೆಚ್ಚಮಾಡಿ ಏರ್ಪಡಿಸಿರುವುದರಿಂದ ನಗರ ನಿವಾಸಿಗಳು ಅನುಕೂಲವಿದ್ದಂತೆಲ್ಲಾ ಅವುಗಳನ್ನು ಉಪಯೋಗಿಸಿಕೊಂಡು ಸೌಖ್ಯಪಡಬೇಕಾದುದೇ ಅಲ್ಲದೆ ಅಧಿಕಾರವರ್ಗದವರ ಶ್ರಮವನ್ನು ಸಾರ್ಥಕಪಡಿಸಬೇಕಾದುದೂ ಅಗತ್ಯವೆಂದು ಅವರು ಸೂಚಿಸಿರುವುದನ್ನು ಯಾರಾದರೂ ಒಪ್ಪುತ್ತಾರೆ. ಆದರೆ ಇವುಗಳಿಗೆಲ್ಲಕ್ಕಿಂತಲೂ ಮುಖ್ಯವಾದ ವಿಷಯವೊಂದರೆ ತಮ್ಮ ಸನ್ಮಾಧಾನ ಪತ್ರಿಕೆಯಲ್ಲಿ ಪ್ರೆಸಿಡೆಂಟರವರು ಆರೋಗ್ಯ ಇಲಾಖೆಯವರಾಗಲೀ, ಮ್ಯುನಿಸಿಪಾಲಿಟಿಯವರಾಗಲೀ ಸಂಪೂರ್ಣವಾಗಿ ನಿರ್ದೋಷಿಗಳಿದಾಗಲಿ, ಸಂಪೂರ್ಣ ಪ್ರಯೋಜಕರಾಗಿದಾರೆಂದಾಗಲೀ ಹೇಳಿಕೊಳ್ಳುವುದಿಲ್ಲವೆಂದು ಹೇಳಿರುವುದು ಸತ್ಯವಾದ ಮಾತೇ ಸರಿ. ಮತ್ತೂ ಅಧಿಕಾರವರ್ಗಕ್ಕೆ ತಮ್ಮ ಕುಂದುಕೊರತೆಗಳನ್ನು ಹೇಳಿಕೊಂಡು ಅವರುಗಳ ಕಷ್ಟಸುಖಗಳಿಗನುಸಾರವಾಗಿ ಮುನಿಸಿಪಾಲಿಟಿಯವರ ಸಹಾಯವನ್ನು ಪಡೆಯಬಹುದಾಗಿ ಅಧಿಕಾರಿಗಳು ದೃಢಪಡಿಸುತ್ತಿದ್ದರೂ ಹಾಗೆ ಸಹಕರಿಸದೆ, ತಮಗಾಗಿ ಕ್ರಮಪಡಿಸಿರುವ ಮುನಿಸಿಪಾಲಿಟಿಯವರ ಕಾರ್ಯದಲ್ಲಿ ಸಹಾನುಭೂತಿ ತೋರಿಸದೆ ಇರುವ ನಗರ ನಿವಾಸಿಗಳ ನಡವಳಿಕೆಯೂ ಸಮರ್ಪಕವಾಗಿರುವುದಿಲ್ಲ.

ಅಧಿಕಾರಿಗಳ ವರ್ತನೆಯಲ್ಲಿ ಪ್ರಜೆಗಳು ಏಕಾ ಏಕಿ ಏಕೀಭವಿಸಿ ನಡೆಯುವುದು ಯಾವ ದೇಶದಲ್ಲೂ ಯಾವ ಕಾಲದಲ್ಲೂ ಇರುವುದಿಲ್ಲ. ಆದುದರಿಂದ ಮುನಿಸಿಪಾಲಿಟಿಯವರು ಈಗ ಮಾಡುತ್ತಿರುವ ಕರ್ತವ್ಯವೇ ಸಾಮಾನ್ಯವಾಗಿ ಮೆಚ್ಚಿಗೆಯನ್ನೂ ಸಂತೋಷವನ್ನೂ ಪಡೆಯತಕ್ಕದ್ದಲ್ಲವಾದುದರಿಂದ ಇನ್ನು ಈ ವಿಚಾರದಲ್ಲಿ ಹೆಚ್ಚು ಮುತವರ್ಜಿ ವಹಿಸಿ ಅಧಿಕಾರ ಚಲಾಯಿಸುವುದಕ್ಕಿಂತ ಪ್ರಜಾಸಾಕಲ್ಯವೇ ಮುಖ್ಯವೆಂದು ಭಾವಿಸಿ ಕೀರ್ತಿಗಳಿಸುವರೆಂದು ನಿರೀಕ್ಷಿಸುತ್ತೇವೆ. ನಗರ ನಿವಾಸಿಗಳಿಗೂ ಒಂದು ಸೂಚನೆಯನ್ನು ಮಾಡುವುದು ಅಗತ್ಯವಾಗಿ ಕಂಡುಬಂದಿದೆ. ಮೇಲ್ಗಡೆ ಮೇಲೆ ಅಧಿಕಾರವರ್ಗದವರು ದೃಢಪಡಿಸುತ್ತಿರುವ ಸಮಾಧಾನವನ್ನು ತೆಗೆದುಕೊಂಡು ತಮ್ಮ ಸೌಖ್ಯ ಕಷ್ಟಸುಖಗಳನ್ನು ಜವಾಬ್ದಾರಿಯುತವಾಗಿ ಅಧಿಕಾರಿಗಳ ಗಮನಕ್ಕೆ ತಂದು ಕಡೆಗೆ ಯಾವ ಕಾರಣದಿಂದ ಅಧಿಕಾರವರ್ಗದವರಲ್ಲಿ ಏಕೀಭವಿಸಿ ನಡೆಯಲು ತೊಂದರೆ ಎಂಬುದನ್ನು ತಿಳಿಯಪಡಿಸಿ ತಕ್ಕ ಸೌಕರ್ಯವನ್ನು ಕಲ್ಪಿಸಿಕೊಳ್ಳುವುದು ಯುಕ್ತವಾಗಿದೆ.

(೩ನೇ ಕಾಲಂನಿಂದ ಮುಂದುವರಿದುದು)

ವ್ಯ ನ್ಯಾಯವಾದುದಲ್ಲವೆಂದು ಹೈಕೋರ್ಟಿನವರು ತಿಳಿಸದೆ ಇದ್ದರೆ ಪ್ರಜೆಗಳಲ್ಲಿ ಅಪೋಹಗಳು ಉಂಟಾಗಬಹುದು. ಇನ್ನು ಹೆಂಡತಿಯನ್ನು ಹೊಡೆಯಲು ಯಾರೂ ಆ ತೀರ್ಮಾನವನ್ನು ಪ್ರಮಾಣವನ್ನಾಗಿ ತೋರಿಸಲು ಅವಕಾಶವಾಗಲಾರದು. ಎಂಬುದಾಗಿ ಪ್ರಸಿದ್ಧಿವಡಿಸಿದರು.

ಹೆಂಡತಿಯನ್ನು ಹೊಡೆಯಲು ಗಂಡನಿಗೆ ಅಧಿಕಾರವುಂಟೆ?

ಹೆಂಡತಿಯು ತವರ್ಮನೆಯಲ್ಲಾಗಲಿ, ಹುಡುಗತನದಲ್ಲಾಗಲೀ ಪ್ರವರ್ತಿಸಿದರೆ ಆಕೆಯನ್ನು ಹೊಡೆಯಲು ಗಂಡನಿಗೆ ಅಧಿಕಾರವಾಗಲೀ ಹಕ್ಕಾಗಲೀ ಇದೆಯೇ? ಎಂಬ ವಿಷಯದಲ್ಲಿ ಒಂದು ತೀರ್ಮಾನವು ವಿದುರಾಸು ಹೈಕೋರ್ಟಿನಲ್ಲಿ ನಡೆದಿರುತ್ತೆ.

ಮಧುರಾ ಜಿಲ್ಲೆಯ ಅಂಡಿಪಟ್ಟಿವಾಸಸ್ಥನಾದ ಸುಬ್ಬಯ್ಯ ಗೌಡ್ರ ಎಂಬುವನು ಈ ಕೇಸಿನಲ್ಲಿ ಅಪರಾಧಿ. ಈತನು ತನ್ನ ಹೆಂಡತಿಯನ್ನು ಬುದ್ಧಿಪೂರ್ವಕವಾಗಿ ಹೊಡೆದನೆಂತಲೂ, ಅಷ್ಟೇ ಅಲ್ಲದೆ ತನ್ನ ಅತ್ತೆಯನ್ನೂ ಸಹ ಹೊಡೆದನಂತಲೂ ಪೋಲೀಸಿನವರು ಫಿರ್ಯಾದನ್ನು ದಾಖಲಮಾಡಿದರು. ವಿಚಾರಣೆಯಲ್ಲಿ ಅಪರಾಧಿಯು ಮದವೆಯಾಗಿ ಐದು ತಿಂಗಳು ಕಳೆದಿತ್ತೆಂದೂ, ಭಾರ್ಯಾ ಭರ್ತಾರರಿಗೆ ಸ್ವಲ್ಪ ವೈಮನಸ್ಯವುಂಟಾಗಿ ಹೀಗಿರುವಲ್ಲಿ ಒಂದು ದಿನ ಅತ್ತೆಯು ಅಡ್ಡಬರಲಾಗಿ ಆಕೆಯನ್ನು ಹೊಡೆದನೆಂದೂ ಪೋಲೀಸಿನವರು ಸಾಕ್ಷಿ ಹೇಳಿದರು. ಜಡ್ಜಿಯವರು ವಿಚಾರಣೆ ಕೊನೆಯಲ್ಲಿ, ಹೆಂಡತಿಯು ಅವಿಧೇಯತೆಯಿಂದ ಕೂಡಿ ಪ್ರವರ್ತಿಸಿದಾಗ ಗಂಡನಿಗೆ ಕೋಪ ಬಂದು ಅವಳನ್ನು ತಿದ್ದಿಸುವ ಉದ್ದಿಶ್ಯ ಹೆಂಡತಿಯನ್ನು ಹೊಡೆದನೆಂದೂ ಏಟು ಸಾಮಾನ್ಯವಾಗಿ ಬಿದ್ದಿದೆಯೆಂದೂ ಪಂಚಾಯಿತರು ಹೇಳುವುದನ್ನು ಒಪ್ಪಬಹುದು. ತನ್ನ ಹೆಂಡತಿಗೆ ಸ್ವಲ್ಪ ಹೊಡೆದ ಮಾತ್ರದಿಂದಲೇ ಅದನ್ನು ಘನಘೋರವಾಗಿ ಮಾಡಿ ಫಿರ್ಯಾದು ಮಾಡಲು ಪೋಲೀಸಿನವರೂ, ಸೆಷನ್ಸ್ ಕೋರ್ಟಿಗೆ ದಾಖಲಮಾಡಲು ಕೆಳಗಿನ ಕೋರ್ಟಿನವರೂ ಕಷ್ಟಪಟ್ಟಿರುವುದು ತುಂಬಾ ಆಶ್ಚರ್ಯಕರವಾಗಿದೆ ಗಂಡಹೆಂಡಿರ ವ್ಯಾಜ್ಯದ ಮಧ್ಯದಲ್ಲಿ ವ್ಯಭಿಚಾರಿಯಾದ ಅತ್ತೆಯು ಪ್ರವೇಶಿಸಿದಾಗ ಹೆಂಡತಿಯ ಮೇಲಿನ ಕೋಪದಿಂದ ಅತ್ತೆಗೆ ಒಂದು ಏಟು ಬಿದ್ದಿರಬಹುದು ಆದ್ದರಿಂದ ಅದು ಮಾತ್ರ ಶಿಕ್ಷಾರ್ಹವಾಗಬಹುದೆಂದು ಒಂದು ತಿಂಗಳ ಕಠಿಣ ಶಿಕ್ಷೆಯನ್ನು ವಿಧಿಸಿ ಹೆಂಡತಿಯನ್ನು ಹೊಡೆದನೆಂಬ ಅಪರಾಧವನ್ನು ವಜಾ ಮಾಡಿದರು.

ಈ ತೀರ್ಮಾನದ ಮೇಲೆ ಯಾರೂ ಹೈಕೋರ್ಟಿಗೆ ಅಪೀಲು ಮಾಡಲಿಲ್ಲವಾದರೂ ಹೈಕೋರ್ಟಿನವರು ತಮಗೆ ತಾನೇ ಇದನ್ನು ಪರಿಶೀಲಿಸಿ ಇನ್ನೊಂದು ತೀರ್ಮಾನವನ್ನು ಪ್ರಚಾರಪಡಿಸಿದರು.

ಏನೆಂದರೆ—ಸೆಷನ್ಸ್ ಜಡ್ಜಿಯವರು ಅಪರಾಧಿಯನ್ನು ಪೊದಲನೆ ಅಪರಾಧದಿಂದ ಬಿಡುಗಡೆ ಮಾಡಿದ್ದಾರೆ. ಇದಕ್ಕೆ ಮೇಲೆ ಪೋಲೀಸಿನವರು ಅಪೀಲು ಮಾಡಿರುವುದಿಲ್ಲ. ಆದಾಗ್ಯೂ ಸೆಷನ್ಸ್ ಜಡ್ಜಿಯವರು ತಮ್ಮ ತೀರ್ಮಾನದಲ್ಲಿ ಅನೇಕ ಸ್ಥಳಗಳಲ್ಲಿ ಅವಿಧೇಯತೆಯೇ ಮುಂತಾದ ಕಾರಣಗಳಿಂದ ಪ್ರವರ್ತಿಸಿದ ಹೆಂಡತಿಯನ್ನು ಹೊಡೆಯಲೂ ಶಿಕ್ಷಿಸಲೂ ಗಂಡಂದಿರಿಗೆ ಅಧಿಕಾರವಿರುವಂತೆ ಹೇಳಿರುವುದು ನ್ಯಾಯವಾದುದಲ್ಲ. ಇಂಡಿಯನ್ ಪೀನಲ್ ಕೋಡಿನಲ್ಲಿ ಎಲ್ಲಿಯೂ ಉದಹರಿಸಲ್ಪಟ್ಟಿರುವುದಿಲ್ಲ. ಈ ವಿಷಯವಾಗಿ ಜಡ್ಜಿಯವರು ಹೇಳಿದ ಧರ್ಮಶಾಸ್ತ್ರವಚನ

[೩ನೇ ಕಾಲಮನ್ನು ನೋಡಿ.]

ವನಿತಾಲೋಕ

ಹಿಂದೂ ಸ್ತ್ರೀಯರ ರಾಣೀವಾಸ

ಬಹಳ ಪ್ರಾಚೀನಕಾಲದಿಂದಲೂ ಹಿಂದೂ ನಾರೀವರ್ಣಿಯರ ಚರಿತ್ರೆಯು ಹಿಂದೂ ಸಂಘ ಚರಿತ್ರೆಯೇ ಆಗಿದೆ. ಪೂರ್ವಕಾಲದಲ್ಲಿ ಪ್ರಾರಂಭದಲ್ಲಿ ನಾರಿಯರಿಗೆ ಸ್ವಾತಂತ್ರ್ಯವಿದ್ದಿತು. ಒರಬರುತ್ತ ತಗ್ಗಿಹೋಯಿತು ಆ ಸ್ವಾತಂತ್ರ್ಯ. ಪ್ರಸ್ತುತದಲ್ಲಿ ನಾರಿಯರು ಅಧೀನರಾದರು. ನಾರಿಯರಿಗೆ ಸ್ವತಂತ್ರವನ್ನು ಕೊಡುವುದು ಶ್ರೇಯಸ್ಕರವೆಂದು ಹಲವರು ಹೇಳುವರು.

ನಮ್ಮ ದೇಶದಲ್ಲಿರುವ ದುರಾಚಾರಗಳಲ್ಲಿ ಸ್ತ್ರೀಯರನ್ನು ಅಧೀನರಾಗಿ ಮಾಡಿಕೊಂಡಿರುವುದೊಂದು ಹಿರಿದಾದ ದುರಾಚಾರ. ಅವೀರಿಕಾ ದೇಶದಲ್ಲಿ ನಾರಿಯರು ಸ್ವೇಚ್ಛಾಚಾರಿಗಳಾಗಿ ಪುರುಷರ ಸಂಗಡ ಧಾರಾಳವಾಗಿ ಕಲೆತು ಇಷ್ಟಾಗೋಷ್ಠಿಯನ್ನು ನಿರವೇರಿಸುತ್ತಿದ್ದಾರೆ. ಅವರು ತಮ್ಮ ಮಾನ ಮರ್ಯಾದೆಗಳನ್ನು ಜೇನ್ನಾಗಿ ಕಾಪಾಡಿಕೊಂಡೇ ಪ್ರವರ್ತಿಸುತ್ತಿರುವರು ಸ್ವತಂತ್ರವಾಗಿ. ನಮ್ಮ ದೇಶದಲ್ಲಿ ಶೂದ್ರರೂ ಇನ್ನೂ ಕೆಲವು ಕೀಳು ಜನರೂ ನಾರಿಯರಿಗೆ ಸ್ವಾತಂತ್ರ್ಯವನ್ನು ಕೊಟ್ಟಿರುವರು. ಇತರ ಜನರ ಸ್ತ್ರೀಯರು ರಾಣೀವಾಸಕ್ಕೆ ಪಾತ್ರರಾಗುತ್ತಿದ್ದಾರೆ. ಕೆಲವು ಸಂಸಾರಗಳಲ್ಲಿ ಹೆಂಗಸರನ್ನೂ ಹೊಸಲಿನಿಂದಾಚೆಗೆ ಹೋಗಬಿಡರು. ಮೇಲ್ಮುಸುಕುಗಳನ್ನು ಹಾಕಿಕೊಂಡು ಪೆಟ್ಟಿಗೆ ಗಾಡಿಗಳಲ್ಲಿ ಕುಳಿತು ಪ್ರಯಾಣಮಾಡುವರು ಕೆಲವರು. ಮನೆಯ ಗಂಡಸರಲ್ಲೂ ಸಹ ಧಾರಾಳವಾಗಿ ಮಾತನಾಡಲೂ ಅವಕಾಶವಿರುವುದಿಲ್ಲ. ಯುವತಿಯರಿಗೆ ತಮ್ಮ ಸಹೋದರ, ಪಿತೃ, ಮಾತೃವರ್ಗ ಜನರಲ್ಲದೆ ಇತರರಲ್ಲಿ ಮಾತನಾಡುವುದು ಅಪ್ರಶಸ್ತವಾಗಿದೆ. ಅಪಮಾನವೂ ಸಶಂಯಾಸ್ಪದವೂ ಆಗಿದೆ.

ಮನೆಗಳಲ್ಲಿ ಒಳಗೇ ಹೆಂಗಸರು ಇರುವುದು ರೂಢಿಯಾಗಿದೆ. ಗಂಡಸನ್ನು ನೋಡಿದರೆ ಥಟಕ್ಕನೆದ್ದು ಓಡಿಹೋಗುವರು. ಗಂಡನಲ್ಲಾಗಲೀ ಹಗಲು ಮಾತನಾಡುವುದು ಕೆಲವರಲ್ಲಿ ಆಗದು! ಅತನು ವ್ಯಾಧಿಗ್ರಸ್ತನಾಗಿದ್ದಾಗ್ಯೂ ಸಮೀಪದಲ್ಲಿದ್ದು ಉಪಚಾರವನ್ನು ಮಾಡುವುದು ಅಕ್ಕನುವಾಗಿದೆಯಲ್ಲಾ! ಎಂಥಾ ರಾಣೀವಾಸ! ಹೆಂಗಸರಿಗೆ?

ನೂತನ ವಿದ್ಯಾಭ್ಯಾಸವನ್ನು ಮಾಡಿದ ಉದ್ಯೋಗಸ್ಥರೂ ಕೂಡ ಕೆಲವರು ತಮ್ಮ ಯುವತಿಯರಿಗೆ ರಾಣೀವಾಸವನ್ನು ವಿಧಿಸಿರುವರು. ಅನಂದಕರವಾದ ಭಗವಂತನ ಸೃಷ್ಟಿವಿಶೇಷವನ್ನು ಕಣ್ಣಾರೆ ನೋಡದೆ ಪ್ರಪಂಚಜ್ಞಾನಹೀನರಾಗಿ ನಾರಿಯರು ಅಜ್ಞಾನಾಂಧಕಾರದಲ್ಲಿರುವುದು ಕಡುಶೋಚನೀಯ. ಅವರಿಗೆ ಅನೇಕವೇಳೆ ಪರಿಶುದ್ಧವಾದ ಗಾಳಿಯೂ ಸೋಕುವುದಿಲ್ಲವಲ್ಲ! ಅಂತವರ ಸಂತತಿಯವು ಬಲಹೀನವಾಗುತ್ತಿದೆ. ಸಂತೋಷವಂತೂ ಕಣ್ಮರೆಯಾಗುತ್ತಿದೆ.

ಈ ಹಾಳು ರಾಣೀವಾಸವು ಯಾವ ಕಾಲದಲ್ಲಿ ಯಾರ ಮಹಿಮೆಯಿಂದ ಲಭಿಸಿತೋ ತಿಳಿಯದು ಪುರಾಣ ಕಾಲಗಳಲ್ಲಿ ನಾರಿಯರು ಪುರುಷರೊಡನೆ ಸೇರಿ ಸ್ವೇಚ್ಛೆಯಿಂದ ಸುಭಾಷಣೆ ನಡೆಸುತ್ತ, ಸದಾಚಾರ ಸಂಪನ್ನರಾಗಿಯೂ, ಸಖಿಯರೊಡನೆ ವನವಿಹಾರ ಮಾಡುತ್ತಿದ್ದರೆಂದೂ ಭಾರತ, ರಾಮಾಯಣಾದಿ ಗ್ರಂಥಗಳಲ್ಲಿ ಉದಹರಿಸಿರುವರು, ಈಗ ಆ ಮಾತುಗಳು ಸ್ವಪ್ನಪ್ರಾಯ!

ಸ್ತ್ರೀಯರಿಗೆಂದಿಗೂ ಸ್ವಾತಂತ್ರ್ಯವನ್ನು ಕೊಡಬಾರದೆಂದೂ ಬಾಲ್ಯದಲ್ಲಿ ತಂದೆಯೂ, ಯೌವ್ವನದಲ್ಲಿ ಗಂಡನೂ, ವೃದ್ಧಾಪ್ಯದಲ್ಲಿ ಪುತ್ರನೂ ಕಾಪಾಡಬೇಕೆಂದು ಮನುಸ್ಮೃತಿಯಲ್ಲಿ ಹೇಳಿದೆ. ಈ ಉತ್ತಮ ಆದರ್ಶವು ಅಪಾರ್ಥಕ್ಕೊಳಗಾಗಿ ಪುರುಷರ ಅನುಮಾನದಿಂದಲೂ, ಅಹಂಭಾವದಿಂದಲೂ ಪೋಷಿತವಾಗಿ ದಿನದಿನಕ್ಕೂ ಅನಿವೃದ್ಧಿಯಾಗಿ ಮುಸಲ್ಮಾನರ ಕಾಲದಲ್ಲಿ ಅವು ಭಯದಿಂದ ಬಲಪ್ರದವಾಗಿ ಈಗ ಪೂರ್ವಾಚಾರವೆಂದು ಸ್ಥಿರಪಟ್ಟ ಈ ರಾಣೀವಾಸವು ನರನಾರಿಯರ ನೈಸರ್ಗಿಕ ಜೀವನವನ್ನು ನಿಸ್ಸಾರವನ್ನಾಗಿ ಮಾಡಿ ದೇಶದಲ್ಲೆಲ್ಲಾ ವ್ಯಾಪಿಸಿರುತ್ತದೆ.

ಇದ್ದೇ ನಮ್ಮ ದುರ್ಗತಿ. ಇದನ್ನು ತಪ್ಪಿಸಲು ಪ್ರಯತ್ನಪಡಬೇಕು ನಾವು. ನಮ್ಮ ಹೆಂಗಸರನ್ನು ಭೋಗೇಚ್ಛೆಯಿಂದ ಅಧೀನಮಾಡಿಕೊಂಡು ನಾವು ಸದಾಧೀನರಾಗಿದ್ದೇವೆ. ಸ್ವಾತಂತ್ರ್ಯವನ್ನು ಕೊಡವೆ ಅವರನ್ನು ಕಬ್ಬಿಣದ ಪೆಟ್ಟಿಗೆಗಳಲ್ಲಿ ಸಾಕಿದರೂ ಅವರ ದುರ್ಬುದ್ಧಿಯು ಹೋಗುವುದಿಲ್ಲ. ಅವರಿಗೆ ಜ್ಞಾನಾಭಿವೃದ್ಧಿಯನ್ನುಂಟುಮಾಡಿ ಸ್ವತಂತ್ರವನ್ನು ಕೊಟ್ಟು ಸರಿಸಮಾನತೆಯಿಂದ ನೋಡಿದರೆ ಆಗ ಗಂಡಸರ ಮನಸಿಗೆಷ್ಟು ಎಷ್ಟು ಆಹ್ಲಾದ ಮೌಧುರ್ಯದಿಂದ ನಗುವುದು!

ನಾವೀಗ ಹೆಂಗಸರಿಗೆ ಕಲ್ಪಿಸಿರುವ ನಿರ್ಬಂಧಗಳನ್ನೆಲ್ಲಾ ಅವರೇ ನಮಗೆ ಕಲ್ಪಿಸಿರುವರೆಂದು ಕ್ಷಣಕಾಲ ಯೋಚಿಸಿದರೇ ಆದರೆ ಆಗ ತಿಳಿಯುವುದು ಅದರ ಮಹಿಮೆ. ಸ್ವಲ್ಪದೂರ ಹೊಂಟು ಸ್ತ್ರೀಮಲಯಾಳಕ್ಕೆ ನೋಡಿಕೊಂಡು ಬನ್ನಿರಿ! ರಾಜ್ಯಪರಿಪಾಲಕರು, ಮಂತ್ರಿಗಳು, ಉದ್ಯೋಗಿಗಳು, ವಿದ್ವಾಂಸರು, ಸೈನಿಕರು ಎಲ್ಲರೂ ಅವರೇ. ನಮ್ಮ ದೇಶದಲ್ಲಿ ಹೇಗೆ ಪುರುಷರು ಭೋಗಗಳನ್ನು ಅನುಭವಿಸುವರೋ ಹಾಗೆ ಅಲ್ಲಿ ಸ್ತ್ರೀಯರು ಸರ್ವಸುಖಾನುಭವಿಗಳಾಗಿದ್ದಾರೆ.

ಸಿಂದ್ ಹೈದರಾಬಾದಿನ ನ್ಯಾಷನಲ್ ಕಾಲೇಜಿನ ಪ್ರೊಫೆಸರು ಕಾಂಗ್ರೆಸ್ ಕೆಲಸಗಳಲ್ಲಿ ಕೈಹಾಕುತ್ತಾರೆಂದೂ ಸೋಷಿಯಲಿಸ್ಟ್ ಪಾರ್ಟಿಯವರನ್ನು ತಮ್ಮ ಮನೆಗೆ ಒರಮಾಡುತ್ತಾರೆಂದೂ ಸರ್ಕಾರದವರು ಅವರನ್ನು ರಾಜೀನಾಮೆಯನ್ನು ಕೊಡಬೇಕೆಂದು ಅಜ್ಞೆಮಾಡಿದ್ದಾರೆ.

ಚುಟುರ್ಕಾನೆಯಲ್ಲಿ ಒಬ್ಬ ಬಾಲಕನು ಮೀದ ಕೊಂಬಿಗೆ ಹಗ್ಗವನ್ನು ಕಟ್ಟಿ ಅದರ ಇನ್ನೊಂದು ತುದಿಯನ್ನು ಹಿಡಿದುಕೊಂಡು ಪ್ರವಾಹದ ಮೇಲೆ ಉಯ್ಯಾಲೆಯಾಡುತ್ತಿದ್ದನು. ಹಗ್ಗವು ಅಕಸ್ಮಾತ್ತಾಗಿ ಕಿತ್ತು ಹೋಗಲು ಬಾಲಕನು ಕಾಲುವೆಯಲ್ಲಿ ಬಿದ್ದುಹೋದನು. ಅಂಬಿಗರು ದೋಣಿಯನ್ನು ಬಿಟ್ಟುಕೊಂಡು ಕಷ್ಟಪಟ್ಟು ಹುಡುಕಿದರೇ ವಿನಹಾ ಏನೂ ಪ್ರಯೋಜನವಾಗಲಿಲ್ಲ.

ಶ್ರೀಮತಿ ಸೋರ್ವಿಯಾ ಸೊರಬ್ಜಿಯವರ ಸಲಹೆ.

ಭಾರತದೇಶದಿಂದ ಲಂಡನ್ನಿಗೆ ಹೋಗಿ ಅಲ್ಲಿಯೇ ವಾಸವಾಡಿಕೊಂಡು ಪತ್ರಿಕೆಗಳಿಗೆ ಲೇಖನಗಳನ್ನು ಬರೆಯುತ್ತಿರುವರು ಇವರು. ಈಚೆಗೆ ಲಂಡನ್ ಟೈಮ್ಸ್ ಪತ್ರಿಕೆಯಲ್ಲಿ ಇವರ ಪ್ರಚುರಪಡಿಸಿದ ಲೇಖನದಿಂದ ಇಂಡಿಯಾದಲ್ಲಿ ಬಾಲ್ಯವಿವಾಹಗಳನ್ನು ನಿಲ್ಲಿಸಲು ಸಾಧ್ಯವಿಲ್ಲವೆಂದು ಸ್ಪಷ್ಟವಾಗುವುದು ಇಂಗ್ಲೆಂಡಿನಲ್ಲಿರುವಂತೆ ವಿವಾಹಗಳನ್ನು ರಿಜಿಸ್ಟರ್ ಮಾಡುವ ಕಾರ್ಯ ಸ್ವಾಸವಾಗಲಿ, ಸುಲಭವಾಗಲಿ ನಮ್ಮ ದೇಶದಲ್ಲಿಲ್ಲವೆಂದೂ ಬಾಲಿಕೆಯರ ವಯಸ್ಸನ್ನು ನಿರ್ಣಯಿಸುವುದು ಕಷ್ಟಸಾಧ್ಯವೆಂದೂ, ಈ ಕಾರಣಗಳಿಂದ ಶಾರದಾ ಆಕ್ಟನ್ನು ಜಾರಿಗೆ ತರಲು ಸಾಧ್ಯವಾಗದೆಂದು ಹೇಳುತ್ತಿರುವರು. ಕೋರ್ಟಿನಲ್ಲಿ ಕೇಸು ಮಾಡಿ ಬಾಲ್ಯವಿವಾಹವನ್ನು ನಿಲ್ಲಿಸಿದಾಗ ಅಂತಹ ಬಾಲಿಕೆಯರು ದುಃಸ್ಥಿತಿಯ ಪಾಲಾಗುವರಾದುದರಿಂದ ಈ ವಿಷಯವನ್ನು ಕುರಿತು ಸಂಘಸಂಸ್ಥರ್ತರು ಆಲೋಚಿಸದೆ ಇರುವರು. ತಂದೆತಾಯಿಗಳು ತಮ್ಮ ಮಕ್ಕಳ ಶ್ರೇಯಸ್ಸನ್ನು ಕೋರಿಯೇ ಕೆಲವು ಸಂದರ್ಭಗಳಲ್ಲಿ ಬಾಲ್ಯದಲ್ಲಿ ವಿವಾಹವನ್ನು ಮಾಡುತ್ತಿರುವರೆ ಹೊರತು ಇದರಿಂದ ಹಿಂದೂ ಸಂಘವು ಹಾಳಾಗುತ್ತಿರುವದೆಂದು ಸಂಘಸಂಸ್ಥರ್ತರಲ್ಲದೆ ವಿದೇಶಸ್ಥರು ಕೂಡ ಹೊಟ್ಟೆ ಉರಿದುಕೊಳ್ಳುವದು ವಿಚಾರಕರವು. ದೇಶವು ಆರ್ಥಿಕ ಮುಗ್ಗಟ್ಟಿಗೆ ಸಿಕ್ಕಿ ಬಾಲಿಕೆಯರಿಗೆ ತಕ್ಕವನು ಸಿಗದೆ ಇರುವಾಗ ಈ ಆಕ್ಟು ತೊಂದರೆಯನ್ನು ಹೆಚ್ಚು ಮಾಡುವದಲ್ಲದೆ ಮುಖ್ಯವಾದ ಲಾಭವೂ ಇಲ್ಲ. ಶ್ರೀಮತಿ ಸೊರಬ್ಜಿಯವರು ಕೂಡ ಶಾರದಾ ಆಕ್ಟಿನಿಂದ ತೊಂದರೆಗಳು ಏರ್ಪಡುವೆಂದು ಸೂಚಿಸಿರುವದರಿಂದ ಸಂಘಸಂಸ್ಥರ್ತರು ಅವರ ಅನುಸರಣೆಯನ್ನು ಸಾಕುಮಾಡುವರೆಂದು ಬಯಸುತ್ತೇವೆ. (ತ್ರಿ.

---

೨೦ ನಿಮಿಷದಲ್ಲಿ ೨೦ ಲಕ್ಷ ರೂಪಾಯಿ ಸಂಪಾದನೆ.

ಲಂಡನ್ ನಗರಕ್ಕೆ ಕಳೆದವಾರ ಒಬ್ಬ ಕೆಲಸಗಾರನು ಒಂದಿಳಿದನು. ಅವನು ಮೊದಲು ಫೋರ್ಡ್ ಕಂಪೆನಿಯಲ್ಲಿ ಕೆಲಸಮಾಡುತ್ತಿದ್ದನು. ಹೆಸರು ಇರ್ವಿಂಗ್ ಕೈಸರ್. ಇವನು ಒಂದು ಹೋಟಲಿನಲ್ಲಿ ಕೂತು ತಿಂಡಿ ತಿನ್ನುತ್ತಿರುವಾಗ ಒಂದು ಶಂಕೆಯ ಹೊಸ ಹಾಡನ್ನು ರಚಿಸಿದನಂತೆ. ಅದನ್ನು ರಚಿಸಿ ಹಾಗೆಯೇ ಮೆಲ್ಲನೆ ಹಾಡಿಕೊಳ್ಳುತ್ತಾ ಹೊರಹೊಂಟನಂತೆ. ಆ ಹಾಡನ್ನು ಕೇಳುತ್ತಿದ್ದ ಹೋಟಲು ಜವಾನರೆಲ್ಲರೂ ಅದನ್ನಾರಂಭಿಸಿದರಂತೆ. ಹೀಗೆ ಒಬ್ಬರಿಂದೊಬ್ಬರು ಅದನ್ನು ಕಲಿಯುತ್ತಾ ಕೊನೆಗೆ ಅದು ಒನರೆಲ್ಲರನ್ನೂ ಆವರಿಸಿತಂತೆ ಆ ಹಾಡಿನ ಕಾಪಿರೈಟಿನಿಂದಲೇ ಈ ಕೂಲಿಗಾರನಾಗಿದ್ದವನಿಗೆ ಇಪ್ಪತ್ತು ಲಕ್ಷ ರೂಪಾಯಿಯು ಸಂಪಾದನೆಯು ಆಯಿತ.

ಕಾಂಗ್ರೆಸ್ಸಿನ ಕಾರ್ಯಕಲಾಪಗಳ ಪ್ರಚಾರಕ್ಕಾಗಿ, ಪಂಡಿತ ಜವಹರಲಾಲರವರು ಲಕ್ನೋವಿನಲ್ಲಿ ಒಂದು ದೈನಂದಿನ ಪತ್ರಿಕೆಯನ್ನು ಪ್ರಕಟಿಸುವವರಾಗಿರುತ್ತಾರೆಂದು ತಿಳಿಯಬಂದಿದೆ.

ವರ್ತಮಾನಗಳು

ಈ ಯುದ್ಧವನ್ನು ಇಟಲಿಯವರು ಹಾಳುಮಾಡಿದ್ದಕ್ಕಾಗಿ ಅಬಿಸೀನಿಯಾ ಚಕ್ರವರ್ತಿಯವರು ಆ ದೇಶದ ಇಂಪೆನಿಯನರಿಗೆ ೧ ಲಕ್ಷ ಪೌಂಡ ಗಳ ನಷ್ಟವನ್ನು ಕೊಡಬೇಕೆಂದು ನೋಟೀಸು ಕೊಟ್ಟಿರುವರು.

೦ ೦

ಇಟಲಿಯ ದುರಾತಗಳನ್ನು ನಾನಾ ಜಾತಿ ಸಮಿತಿಯು ತಡೆಯಲಾರದೆ ಹೋಯಿತಂ. ಅದುದರಿಂದ ಅನೇಕರಿಗೆ ಇದರಲ್ಲಿ ವಿಶ್ವಾಸವು ತಗ್ಗುತ್ತಿರುವಂತೆ ಕಾಣಬರುತ್ತಿದೆ.

* *

ಚಿಕಾಗೋದಲ್ಲಿ ೨೫ ಸಾವಿರ ಗಡಿಗಳ ಉದ್ದವುಳ್ಳ ಬ್ರಂಹಾಂಡವಾದ ಸ್ತಂಭವನ್ನು ನಿರ್ಮಿಸಲು ಏರ್ಪಾಡು ನಡೆಯುತ್ತಿದೆ. ಇಷ್ಟು ಉದ್ದವಾದ ಸ್ತಂಭವು ಎಲ್ಲಿಯೂ ಇಲ್ಲವೆಂದು ತಿಳಿಯಬಂದಿದೆ. ಶಾಸ್ತ್ರಜ್ಞರು ಇದರ ಮೇಲೆ ಹತ್ತಿ ಪರಿಶೋಧನೆಗಳನ್ನು ಮಾಡಲು ಅನುಕೂಲವಾಗತ್ತದೆ.

೦ ೦

ಇಟಲಿಯಲ್ಲಿ ಈಚೆಗೆ ಜನಸಂಖ್ಯೆಯು ಸ್ವಲ್ಪ ತಗ್ಗಿದ್ದರಿಂದ, ಇದಕ್ಕೆ ಕಾರಣವು ಅಬಿಸೀನಿಯಾ ಯುದ್ಧವೇ ಎಂದು ಅನೇಕರು ಅಭಿಪ್ರಾಯ ಪಡುವರು. ಅನೇಕರು ಮನೆಗಳನ್ನು ಬಿಟ್ಟುಹೋದುದರಿಂದ ಜನಸಂಖ್ಯೆಯಲ್ಲಿ ಕೂಡ ೫೦ ಸಾವಿರ ತಗ್ಗಿರುತ್ತದೆ.

೦ ೦

ಬ್ರಿಟಿಷ್ ಸೈನ್ಯಕ್ಕೆ ಜನರನ್ನು ಸೇರಿಸಲು ಪ್ರಕಟಣೆಯನ್ನು ಹೊರಡಿಸಿದ ಕೂಡಲೇ ೬ ಲಕ್ಷ ಸಾವಿರ ದರ ಖಾಸ್ತುಗಳು ಬಂದವಾದರೂ, ೨ ಲಕ್ಷ ಸಾವಿರ ಮಂದಿಯನ್ನು ಮಾತ್ರ ಸೈನ್ಯಸ್ಯಕ್ಕೆ ಸೇರಿಸಿಕೊಂಡರು. ಆರ್ಥಿಕ ದುಸ್ಥಿತಿಯು ಹೇಗಿರುವುದೆಂಬುದು ಇದರಿಂದ ವ್ಯಕ್ತವಾಗುವುದು.

೦ ೦

ಸ್ವಿಡ್ಜರ್ಲೆಂಡು ಸಂಹದ್ದಿನಲ್ಲಿ ನಾಜಿಗಳು ಗಲಾಟೆ ಮಾಡುತ್ತಿರುವರ. ಸ್ವಿಸ್ ಜನರಿಗೆ ಆರ್ಥಿಕ ಮುಗ್ಗಟ್ಟನ್ನು ತಂದಿಡಲು ನಾಜೀಗಳು ಯತ್ನಿಸುತ್ತಾ ಜರ್ಮನಿಯು ಪುನಃ ಯೂರೋಪಿನಲ್ಲಿ ಪ್ರಾಮುಖ್ಯತೆಗೆ ಬರಲು ವಿಶ್ವಪ್ರಯತ್ನವನ್ನು ಮಾಡುತ್ತಿರುವರ.

೦ ೦

ಗಂಗಾ ನದಿಯ ಜಲದಲ್ಲಿ ಆದ್ಭುತಶಕ್ತಿಯು ಇರುವದೆಂದೂ ಅದರ ನೀರನ್ನು ಕುಡಿದಲ್ಲಿ ಮನಸ್ಸಿನ ಕಲ್ಮಷಗಳೆಲ್ಲವೂ ನಿವಾರಣೆಯಾಗುವವೆಂದೂ ಅದುದರಿಂದ ಆ ಜಲವನ್ನು ಕುಡಿಯುವದು ಶ್ರೇಷ್ಟವೆಂದು ಹಿಂದುಗಳು ಭಾವಿಸುವರು.

೦ ೦

ಫಿನ್ಲೆಂಡಿನಲ್ಲಿಯ ಸ್ವಲ್ಪ ಭಾಗವನ್ನು ನಿರ್ಮಾನುಷ್ಯವಾಗಿ ಮಾಡಿ ಅಲ್ಲಿಯವರನ್ನೆಲ್ಲಾ ರಷ್ಯಾದಲ್ಲಿಯೇ ಇರಿಸಿಕೊಂಡಿರುವರು. ಜರ್ಮನಿಯು ಫಿನ್ಲೆಂಡ್ಡು ಮೂಲಕವಾಗಿ ಮೇಲೆ ಬರದಿರುವಂತೆ ಮಾಡಲಿಕ್ಕಾಗಿ ಈ ಏರ್ಪಾಟು ಮಾಡಿರುವರ. ಅಲ್ಲದೆ ರಷ್ಯದ ಸರಹದ್ದಿನಲ್ಲಿ ದೊಡ್ಡ ಸೈನ್ಯವನ್ನಿರಿಸಿರುವರು.

ಸ್ಯೂಯ್ಕಾಸಿಲಿಂದ ಲಂಡನ್ನಿಗೆ ಪ್ರಯಾಣಮಾಡುವ ಸಿಲ್ವರ್ ಜೂಬಿಲಿ ರೈಲುಬಂಡಿಯು ಗಂಟೆಗೆ ೧೧೨ ಮೈಲಿ ಪ್ರಯಾಣ ಮಾಡುವುದೆಂದೂ, ಇದಕ್ಕಿಂತಲೂ ವೇಗವಾಗಿ ಹೋಗುವ ರೈಲು ಪ್ರಪಂಚದಲ್ಲಿ ಇನ್ನೊಂದು ಇಲ್ಲವೆಂದೂ ತಿಳಿಯುಬಂದಿನೆ.

ಎಲ್ಲವುಗಳಿಗಿಂತ ಬೆಳಗು ಬಹಳ ವೇಗವಾಗಿ ನಡೆಯುವದೆಂದು ಶಾಸ್ತ್ರಜ್ಞರು ಕಂಡುಹಿಡಿದಿದ್ದರು. ಇದಕ್ಕಿಂತ ವೇಗವಾಗಿ ನಡೆಯುವ ವಸ್ತುವು ಮತೊಂದಿರುವದೆಂದು ಕ್ಯಾಲಿಫೋರ್ನಿಯಾ ಯೂನಿವರ್ಸಿಟಿಯಲ್ಲಿ ಕಂಡುಹಿಡಿದಿರುವರು,

ತನ್ನ ತಾಯಿಯು ವ್ಯಾಧಿಗ್ರಸ್ಥಳಾಗಿ ಕಷ್ಟ ಪಡುತ್ತಿರುವುದನ್ನು ನಿವಾರಿಸಲು ಸಹಾಯದೇಕೆಂದು ಎರಡನೆ ತರಗತಿಯಲ್ಲಿ ಕುಳಿತಿದ್ದ ರೈಲ್ವೇ ಪ್ರಯಾಣಿಕ ಳೊಬ್ಬ ಲಂಗ್ಲೀಯ ರಮಣಿಯನ್ನು ಒರ್ಮಾದವನೊಬ್ಬನು ಕತ್ತಿಯಿಂದ ಹಿಂಸಿಸಿ ೪೦ ರೂಪಾಯಿಗಳನ್ನು ತಸ್ಕರಮಾಡಿಕೊಂಡು ಪರಾರಿಯಾದನು.

ಸಿಕಂದರಾಬಾದಿನಲ್ಲಿ ಕೆಲವು ಮಂದಿ ಕಳ್ಳರು ಹೊರಗೆ ಬಂದಿರುವರು. ಕಳ್ಳರು ತಾವು ಮಾಡುವ ಕಳ್ಳತನವನ್ನು ಮೊದಲೆ ಕಾಗದಗಳ ಮೂಲಕ ತಿಳಿಸುತ್ತಾರಂತೆ. ಪೋಲೀಸರನ್ನು ಆಶ್ಚರ್ಯಪಡಿಸಿ, ಹೆದರಿಸಿ ಬೆಳಗಿನ ಹೊತ್ತಿನಲ್ಲೇ ಚೋರಿಮಾಡುತ್ತಾರಂತೆ. ಪೋಲೀಸರು ಇವರನ್ನು ಪತ್ತೆಮಾಡಲಾಗಿರುವುದಿಲ್ಲ. ಸುತ್ತಮುತ್ತಲಿನ ನಗರವಾಸಿಗಳಿಗೆಲ್ಲಾ ಇದರಿಂದ ಕುಂಬಾ ಹೆದರಿಕೆಯುಂಟಾಗಿದೆ. ಈ ಕಳ್ಳರು ಬಹುಶಃ ನಿರುದ್ಯೋಗಿಗಳಾದ ವಿದ್ಯಾವಂತರೆಂದು ಊಹಿಸಿರುವರು.

ಜರ್ಮನ್ನೀ ದೇಶದ ಪುರಸ್ಥರೆಲ್ಲರೂ ಒಂದು ವರ್ಷ ಕಾಲ ನಿರ್ಬಂಧದಿಂದ ಸೈನಿಕ ಶಿಕ್ಷಣವನ್ನು ಹೊಂದಬೇಕೆಂದಿದ್ದ ಕಾಲಪರಿಮಿತಿಯನ್ನು ಈಗ ಎರಡು ವರ್ಷಗಳನ್ನಾಗಿ ಮಾಡಿದ್ದಾರೆ ಒಂದು ವರ್ಷದಲ್ಲಿ ೧೦ ಲಕ್ಷ ಸಂಖ್ಯೆಯು ಸೈನಿಕದಳಕ್ಕೆ ಸೇರಿದುದೇ ಇದಕ್ಕೆ ಕಾರಣವಿರಬಹುದು. ಇದರಿಂದ ಈ ವರ್ಷಾಂತ್ಯದಲ್ಲಿ ೨೦ ಲಕ್ಷ ಜರ್ಮನಿಯವರು ಸೈನಿಕ ಶಿಕ್ಷಣ ಪಡೆದವರಾಗಿ ಯುದ್ಧಸನ್ನದ್ಧವಾಗುವಂತಾಯಿತು. ಇದನ್ನು ಕಂಡು ಇತರ ಯೂರೋಪಿನ ರಾಷ್ಟ್ರಗಳು ಅಪರ ವೇಲೆ ಎಸವನ್ನು ಕಾರುತ್ತಿವೆ.

" ಈಗ ಪಾಶ್ಚಾತ್ಯ ಜನಾಂಗಗಳಿಗೆ ಬುದ್ಧಿ ಕೆಟ್ಟುಹೋಗಿದೆ, ಹುಚ್ಚಹುಚ್ಚಾಗಿ ಪ್ರವರ್ತಿಸುತ್ತಲಿದ್ದಾರೆ ; ದುರಹಂಕಾರ ಅಸಹನೆ, ಪಶುಬಲಪ್ರದರ್ಶನ ಜಾತಿದ್ವೇಷ, ಸಾಮ್ರಾಜ್ಯಾಕಾಂಕ್ಷೆ, ಮುಂತಾದ ರಾಕ್ಷಸ ಗುಣಗಳೇ ತಾಂಡವವಾಡುತ್ತಿವೆ, ಇದರಿಂದ ಪ್ರಪಂಚದ ಶಾಂತಿಗೆ ಕಾರಣವಾಗಿ ಪ್ರಾರಂಭವಾದ ' ನಾನಾ ರೀಷ್ಟ್ರಗಳ ಸಮಿತಿಯು ' ನಿಷ್ಪ್ರಯೋಜನವಾಗಿ ಭಗ್ನವಾಗಿರುತ್ತದೆ. ಮಾನವ ಜಾತಿಯಲ್ಲಿ ಇಂತಹ ದುರ್ಗುಣಗಳಿರುವವರಿಗೆ ಎಂತ ರಾಷ್ಟ್ರೀಯ ಸಮಿತಿಯೂ ಏನೂ ಪ್ರಯೋಜನಕ್ಕೆ ಬರಲಾರದು " ಎಂದು ಸರ್ ಸಿ. ಪಿ. ರಾಮಸ್ವಾಮಯ್ಯರವರು ವಿದೇಶಾಸನಲ್ಲಿ ಉಪನ್ಯಾಸ ಮಾಡಿದರು. ಇಟಲಿ ಅಬ್ಸೀನಿಯಾದ ವ್ಯವಹಾರವೇ ಲೀಗಿನ ಮೋಸಭಾವವನ್ನು ಪ್ರಕಟಿಸಿದೆ, ಎಂದೂ ಹೇಳಿದರು.

ನಾರ್ವೆಕಲೊಲೀನಾದಲ್ಲಿ ಕೆಲವರು ವ್ಯಭಿಚಾರಮಾಡುವ ಸ್ತ್ರೀಯರನ್ನು ಸದೆಬಡೆದು ಅವರ ಸರೋಜಗಳನ್ನು ತೆಗೆದುಹಾಕಿಸುತ್ತಿರುವರು. ಇದಕ್ಕೆ ಕ್ರೈಸ್ತ ಮಿಷನೆರಿಗಳೂ ಸಹಾಯ ಮಾಡುತ್ತಿರುವರು.

ಧರ್ಮಗಳನ್ನು ಮಾಡುವರನ್ನು ಮೋಸಪಡಿಸುವರ ಸಂಖ್ಯೆಯು ಇಂಗ್ಲೆಂಡಿನಲ್ಲಿ ಹೆಚ್ಚಿದ್ದರಿಂದ ಇದಕ್ಕಾಗಿ ಶಾಸನವನ್ನು ಮಾಡಲು ಅಧಿಕಾರಿಗಳು ಯೋಚಿಸುತ್ತಲಿರುವರು.

ನ್ಯೂಯಾರ್ಕಿನಲ್ಲಿ ವೃದ್ಧರಾದ ಜಡ್ಜುಗಳೆಲ್ಲ ಸ್ವರವರು ಯುವಕರೇ ಯುವಕರು ಮಾಡುವ ತಪ್ಪುಗಳನ್ನು ವಿಚಾರಿಸಲು ಕೋರ್ಟುಗಳಲ್ಲಿ ಯುವಕರನ್ನೇ ಮೇಜಿಸ್ಟ್ರೇಟರಾಗಿ ನಿಯಮಿಸುವದು ಅಗತ್ಯವೆಂದೂ ತಿಳಿಸಿರುವರು.

ರಾಯಚೂರು ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮಳೆಯಿಲ್ಲದೆ ಕ್ಷಾಮವುಂದಿರುವುದರಿಂದ ನೈಜಾಂ ಪ್ರಭುತ್ವದವರು ನಷ್ಟಪರಿಹಾರಕ್ಕಾಗಿ ೫ ಲಕ್ಷ ರೂಪಾಯಿಗಳನ್ನು ಮಂಜೂರುಮಾಡಿರುವರು. ಈ ಪ್ರದೇಶದಲ್ಲಿ ಪ್ರವಾಹದಿಂದಲೂ ರೋಗಾದಿಗಳಿಂದಲೂ ವಿಶೇಷ ನಷ್ಟವು ಸಂಭವಿಸಿರುತ್ತದೆ.

ಕೆಂಟಕಿಯಲ್ಲಿಯ ಕೋಟೆಯಲ್ಲಿ ಬಂಗಾರವನ್ನು ಶೇಖರಿಸಿಡಲಿಕ್ಕಾಗಿ ಅಮೇರಿಕಾ ಸರ್ಕಾರವು ಎಲ್ಲಾ ಏರ್ಪಾಡುಗಳನ್ನೂ ಮಾಡಿದನಂತರ, ವಾಷಿಂಗ್ಟನ್ನಿಂದ ೧೫೫ ರೈಲುಗಳ ಮೇಲೆ ಮಿಲಿಟರಿ ಕಾವಲಿನೊಂದಿಗೆ ಬಂಗಾರವನ್ನು ಕಳುಹಿಸುತ್ತಿರುವರು. ಅಮೆರಿಕದಲ್ಲಿ ಇಷ್ಟು ಬಂಗಾರವಿರುವದೆಂಬುದು ಈಗಲೇ ಜನರಿಗೆ ತಿಳಿದುಬಂದದ್ದು.

ಪ್ರೆಸೋಕಾರ್ನಿರಾ ಎಂಬ ವಕೀಲನು ಒಬ್ಬ ನೀಗ್ರೋ ಸ್ತ್ರೀಯೊಂದಿಗೆ ಮಲ್ಲಯುದ್ಧವನ್ನು ಮಾಡಿದಾಗ ಒಂದು ಕಾಲಿಗೆ ವ್ಯಾಧಿಯು ಸಂಭವಿಸಿದ್ದರಿಂದ ಚಿಕಿತ್ಸೆಯನ್ನು ಹೊಂದುತ್ತಿರುವನು. ಆತನನ್ನು ಹೂತಿಟ್ಟಲ್ಲಿ ವ್ಯಾಧಿಯು ಗುಣವಾಗುವದೆಂದು ಕಂಡುಹಿಡಿದಿರುವರು. ಇದಕ್ಕಾಗಿ ಆತನು ನ್ಯೂಯಾರ್ಕಿನಿಂದ ಪ್ರಯಾಣ ಹೊರಟಿದ್ದನು.

ಲಂಡನ್ನಿನಲ್ಲಿ ಬೂಟ್ಸುಗಳನ್ನು ಸುಡುವನೊಬ್ಬನ ಹೆಂಡತಿಯು ಮೊದಲು ಒಂದು ಮಗುವನ್ನು ಹೆತ್ತು; ಆತರುವಾಯ ೪ ದಿನಗಳು ಕಳೆದನಂತರ ಮತ್ತೊಂದು ಮಗುವನ್ನು ಹೆತ್ತಳು. ಮೊದಲನೆಯ ಮೊಗವಿನ ತೂಕ ೩ ಪೌಂಡು, ಎರಡನೆಯ ಮಗುವಿನ ತೂಕ ೪ ಪೌಂಡು. ಹೀಗೆ ೪ ದಿನಗಳನಂತರ ಎರಡನೆಯ ಮಗುವನ್ನು ಹೆತ್ತಿರುವದು ಎಲ್ಲರಿಗೂ ಆಶ್ಚರ್ಯವನ್ನುಂಟುಮಾಡಿರುತ್ತದೆ.

ಅಷ್ಟಮ ಯಡ್ವರ್ಡರವರು—ಸೈನಿಕರೂ ಸೈನಿಕೋದ್ಯೋಗಿಗಳೂ ಹೊರಗೆ ಕೆಲಸದಲ್ಲಿ ಹೋಗುತ್ತಿರುವಾಗ ಅವರ ಬಿರುದುಗಳನ್ನು ಸೂಚಿಸುವ ಚಿನ್ಹೆಗಳನ್ನು ಧರಿಸಬೇಕೆಂಬ ನಿಯಮವಿಲ್ಲವೆಂದೂ ದರ್ಬಾರುಗಳಲ್ಲಿ ಮಾತ್ರ ಅವುಗಳನ್ನು ಧರಿಸಬೇಕೆಂದೂ ಸೂಚಿಸಿದರು ಪ್ರಾಚೀನ ಪದ್ಧತಿಯನ್ನು ಇವರು ಒಡಲಾಯಿಸಿದ್ದಕ್ಕಾಗಿ ಕೆಲವರು ಆಕ್ಷೇಪಿಸುತ್ತಿರುವರು.

ಕಛೇರಿಯಲ್ಲಿ ಹಗಲೆಲ್ಲ ದುಡಿದ ಬಳಿಕವಾಗಲಿ,

ದಿನಚರಿಯ ವ್ಯಾಯಾಮಗಳು ಪೂರೈಸಿದನಂತರವಾಗಲಿ,

ಅಥವ ಧೂಳು ಮತ್ತು ಬಿಸಲಿನಲ್ಲಿ ವ್ಯಾವಹಾರಗಳನ್ನು ಮುಗಿಸಿದಮೇಲಾಗಲಿ

ದಣಿದ ದೇಹವನ್ನು

ಯಥಾಸ್ಥಿತಿಗೆ ತರಲು

ಮೈಸೂರು ಗಂಧದ ಸಾಬೂನಿನ

ಶಕ್ತಿವರ್ಧಕ ಸ್ನಾನಕ್ಕೆ

— ಸರಿಸಮವಾದುದು ಮತ್ತಾವುದೂ ಇಲ್ಲ —

ಮತ್ತು, ಇದು ಅತ್ಯಲ್ಪ ಬೆಲೆಯುಳ್ಳದ್ದಾಗಿದೆ.

Shiromani NARAYANACHARYA
Chowkambha, Benarese.

S.U.N. & CO.
BENARES CITY.

ಶಾಸ್ತ್ರಿಗಳೇ ! ಪೂರ್ವಿಕರು ಆರೋಗ್ಯರೇ ಆಥವ ಈಗಿನವರೇ? ರಾಮಣ್ಣಯ್ಯನವರೇ ಪೂರ್ವಿಕರ ಆರೋಗ್ಯನೇ ನಿಜವಾದ ಆರೋಗ್ಯ- ಅದಕ್ಕೆ ಕಾರಣವೇನು ? ಅವರು ರುದ್ರಾಕ್ಷಿಯನ್ನು ಬಿಡದೆ ಯಾವಾಗಲೂ ಧಾರಣೆ ಮಾಡುತ್ತಿದ್ದರು. ಅದರಿಂದ ಏನುಫಲ? ಅದನ್ನು ಧರಿಸಿದರೆ, ಜೀರ್ಣಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ವೀರ್ಯವೃದ್ಧಿ, ಸಂಪತ್ತು, ಕೀರ್ತಿ, ಇಹಪರಗಳೆಲ್ಲಾ ಒಗುವುವು. ಹಾಗಾದರೆ, ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವದು? ಅದು ಲೋಕಪ್ರಸಿದ್ಧಿಹೊಂದಿದ ನಮ್ಮ ಕಾಶೀ ಚೌಖಂಭಾ ಶಿರೋಮಣಿ ನಾರಾಯಣಾಚಾರ್ಯರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮವಾದ ರುದ್ರಾಕ್ಷೀ ದೊರೆಯುವುದು.

ಸುಮ್ಮ ಆಡ್ಡಿ ಪ್ರಮಾಣದ ೫೧ ಮುಖದ ಕಂಠಿಸರ 1 ಕ್ಕೆ ಆಣೆ 3 ರಿಂದ ರೂ 25 ರವರೆಗೆ ; 100 ರುದ್ರಾಕ್ಷಿ ಗಳುಳ್ಳಸರ 1 ಕ್ಕೆ ಆಣೆ 3 ರಿಂದ ರೂ. ೭5 ರವರೆಗೆ ; ಗೌರೀಶಂಕರ ರುದ್ರಾಕ್ಷಿ 1 ಕ್ಕೆ ರೂ 3 ರಿಂದ 50 ರವರಿಗ ; ಪುತ್ತು 3--4--6--7--8 ಮುಖಗಳ ಕಾಳು ಆಣೆ 1 ರಿಂದ ರೂ 10 ರವರಿಗೆ ; 9--10--11 ಮುಖಗಳುಳ್ಳ ಕಾಳು 1 ಕ್ಕೆ ರೂ ೭ ರಿಂದ 30 ರವರಿಗೆ ; 12--13--14 ಮುಖದ ಕಾಳು 1 ಕ್ಕೆ ರೂ 5 ರಿಂದ 100 ರವರಿಗೆ. ಸಣ್ಣ ರುದ್ರಾಕ್ಷೀ ಆವರೇ ಕಾಳಿಗಿಂತ ಸಣ್ಣದಾಗುತ್ತಾ ಕ್ರಯ ಜಾಸ್ತಿ ; ದೊಡ್ಡ ರುದ್ರಾಕ್ಷೀ ಆಡಕೆಗಿಂತ ದೊಡ್ಡದಾಗುತ್ತಾ ಕ್ರಯ ಚಾಸ್ತಿ ಆಗುವುದು. [ವಿವರಕ್ಕೆ ಕಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ] ಆಣೆ ಸ್ಟ್ಯಾಂಪು ಕಳುಹಿಸಿದಲೆ 3 ಇನಾಮುಗಳು : 1 ವಿಶ್ವೇಶ್ವರ ಪಠ, 1 ಕಾತೀನಕ್ಕೆ, 1 ಕ್ಯಾಟಲಾಗಿನೊತನೆ 3 ಇನಾಮುಗಳು-

ವಿಳಾಸ:— ಶಿರೋಮಣಿ ನಾರಾಯಣಾಚಾರ್ಯ,
ಚೌಕಾಂಬಾ. ಕಾಶಿ.

Sadhana Aushadalaya
Dacca (Bengal)

ಸಾಧನ
ಔಷಧಾಲಯ, ಢಕ್ಕ

ಅಧ್ಯಕ್ಷರು--ಭಾಗಲ್ಪುರದ ಮಾಜಿ ರಸಾಯನ ಶಾಸ್ತ್ರ ಪಂಡಿತರಾಗಿದ್ದ ಮ|| ಜೋಗೀಷಚಂದ್ರ ಫೋಸು ಎಂ ಎ. ಎಫ್. ಸಿ ಎಸ್. ಲಂಡ್.

ಆಯುರ್ವೇದ ಶಾಸ್ತ್ರಕ್ಕೆ ಅನುಸಾರವಾಗಿ ಔಷಧಗಳು ತಯಾರಿಸಲ್ಪಡುತ್ತವೆ. ಕ್ಯಾಟಲಾಗು ಉಚಿತವಾಗಿ ಕಳುಹಿಸಲ್ಪಡುತ್ತೆ. ರೋಗ ವಿವರವನ್ನು ತಿಳಿಸಿದರೆ ಛಾರ್ಜಿಲ್ಲದೆ ಸಲಹೆ ಕೊಡಲ್ಪಡುತ್ತೆ.

ಮೃತ್ಯುಧ್ವಜ—ಸಕಲ ರೋಗಗಳನ್ನೂ ನಿವಾರಿಸುತ್ತದೆ. ಸುವರ್ಣ ವಿಶ್ವನಾದದ್ದು. ವಾತ, ಪಿತ್ತ, ಕಫವನ್ನು ಸಮಪಡಿಸಿ, ದೇಹಕ್ಕೆ ಶಕ್ತಿಯನ್ನೂ, ಆರೋಗ್ಯವನ್ನೂ ಉಂಟುಮಾಡುತ್ತದೆ. ಬೆಲೆ ತೊಲಕ್ಕೆ ೪ ರೂಪಾಯಿ.

ಸಶೀಬಾದಿಸರ್ಪ—ಪ್ರಮೇಹ, ಸವಾಯಿ ರೋಗಗಳಿಗೆ ಅವೋಘ ಔಷಧವಾದ ರಸ ವಿಷವನ್ನು ಪರಿಹರಿಸುತ್ತದೆ. ಎಲ್ಲಾ ಮೂತ್ರ ರೋಗಗಳನ್ನೂ ನಿವಾರಿಸುತ್ತದೆ, ರಕ್ತವನ್ನು ಶುದ್ಧಿಪಡಿಸುತ್ತದೆ. ಬೆಲೆ ಸೇರು ೩ ರೂಪಾಯಿ.

ಶುಕ್ರಸಂಜೀವಿನಿ—ನಪುಂಸಕತ್ವ, ಧಾತು ಕ್ಷೀಣತೆ ಮುಂತಾದ ಧಾತ ವಿಕಾರ ರೋಗಗಳನ್ನೂ ಗುಣಪಡಿಸುವ ಶಕ್ತಿವರ್ಧದ ಔಷಧ ಬೆಲೆ ಸೇರು ೧೫ ರೂಪಾಯಿ.

ಅಬಾಲಾಂಧವಯೋಗ—ನಡುನೋವು, ಮುಟ್ಟುದೋಷ, ಒಂಜೆಕನ ಮೊದಲಾದ ಸ್ತ್ರೀಯರ ಎಲ್ಲಾ ಖಾಯಿಲೆಗೂ ದಿವ್ಯೌಷಧ. ಬೆಲೆ ೧೬ ಹೊತ್ತಿಗೆ ೨ ರೂಪಾಯಿ ಮುಖಬಂಧಕ್ಕೆ ೫ ರೂ.

ಔಷಧ ಜಲ್ಲದೆ ಚಿಕಿತ್ಸೆ

ಈ ಕೆಳಗೆ ಕಂಡ ಮಹನೀಯರು ಮೈಸೂರು ನಾರಾಯಣಶಾಸ್ತ್ರಿ ರಸ್ತೆಯಲ್ಲಿ ಶ್ರೀ ಸಿದ್ಧಾಶ್ರಮದಲ್ಲಿರುವ ಶ್ರೀ ಸದ್ಗುರು ಸಿದ್ಧಾರೂಢಸ್ವಾಮಿಗಳ ಶಿಷ್ಯರಾದ ಚೈತನ್ಯಂ ಬಿ ರಾಮದಾಸ್‌ರವರ ಹಸ್ತ ಸ್ಪರ್ಶದಿಂದ ತಮ್ಮ ರೋಗಗಳು ನಿವಾರಣೆಯಾದ ಬಗ್ಗೆ ತಿಳಿಸಿರುವುದಾಗಿ ಅವರು ತಿಳಿಸಿರುತ್ತಾರೆ—

(೧) ಮೈಸೂರು ಸುಣ್ಣದಕೇರಿ ಸಂಜುಂಡಯ್ಯನವರ ಮಗ ಸಿದ್ಧಯ್ಯನೆಂಬುವನಿಗೆ ೩ ವರ್ಷಗಳಿಂದಿದ್ದ ಉಬ್ಬಸವು ೧೫ ದಿನಗಳಲ್ಲಿ ಗುಣವಾಗಿದೆ (೨) ಸುಣ್ಣದಕೇರಿ ವೆಂಕಟಸ್ವಾಮಿ ಮೊದಲಿಯಾರ್ ಮಗ ವೆಂಕಟಾಚಲ ಮೊದಲಿಯಾರವರಿಗೆ ನಿಶ್ಯಕ್ತಿಯು ೧೦-೧೨ ದಿನಗಳಲ್ಲಿ ವಾಸಿಯಾಗಿದೆ. (೩) ಸುಣ್ಣದಕೇರಿ ಮರಿಸಿದ್ದಯ್ಯನವರ ಮಗನಿಗೆ ೪-೫ ತಿಂಗಳಿಂದ ಇದ್ದ ರಕ್ತಭೇದಿಯು ಗುಣವಾಗಿದೆ. (೪) ಲ್ಯಾನ್ಸ್‌ಡೌನ್ ಬಜಾರಿನಲ್ಲಿರುವ ನಂಜಪ್ಪನವರ ಹೆಂಡತಿ ಪಾರ್ವತಮ್ಮನವರ ಕಣ್ಣಿನಲ್ಲಿ ಇದ್ದ ಹೂ ಗುಣವಾಗಿದೆ. (೫) ಚಾಮುಂಡಿಬೆಟ್ಟದಲ್ಲಿರುವ ನಂಜಪ್ಪನವರ ಹೆಂಡತಿ ಸುಬ್ಬಮ್ಮನವರಿಗೆ ಮೈ ಜಳಕು, ಕಣ್ಣು ನೋವು ಗುಣವಾಗಿವೆ.

ಸತ್ತಿರುವ ನಿಮ್ಮ ಪ್ರಿಯೆಬಂಧುಗಳನ್ನು ಮರೆತಿರುವಿರಾ !

ಮರಣ ಹೊಂದಿರುವ ನಿಮ್ಮ ಆಪ್ತ ಬಂಧುಗಳು, ನಿಮ್ಮೊಡನೆ ಪುನಃ ಸಂಭಾಷಿಸಲು ಕಾತರರಾಗಿಯಿತ್ತಾರೆಂದೂ, ನಿಮ್ಮ ಉದಾಸೀನತೆಯು ಅವರನ್ನು ಬಹಳವಾಗಿ ವ್ಯಸನಪಡಿಸುವುದೆಂದೂ ಜೀವಶಾಸ್ತ್ರಜ್ಞರು ಕಂಡುಹಿಡಿದಿದ್ದಾರೆ ! ಸತ್ಯವರು ಎಲ್ಲೋ ಸ್ವರ್ಗಕ್ಕೋ ಇನ್ನೆಲ್ಲಿಗೋ ಹೋಗುತ್ತಾರೆಂದು ಸುಮ್ಮನೆ ಇದ್ದು ಬಿಟ್ಟರೆ, ಅವರಿಗೆ ಮಹಾವ್ಯಸನವನ್ನುಂಟು ಮಾಡುತ್ತೀವೆ. ನಾವೆಷ್ಟು ಪ್ರೀತಿಯುಳ್ಳವರಾಗಿರುತ್ತೇವೆಯೋ, ಸತ್ತವರೂ ಕೂಡ ಅಷ್ಟೇ ಪ್ರೀತಿಯುಳ್ಳವರಾಗಿರುತ್ತಾರೆ ಬೇಕಾದರೆ ನೀವು

ಜೀವಶಾಸ್ತ್ರ ತತ್ವಸಾರ "
ಅಥವಾ
ಸತ್ತವರೆಲ್ಲಿ ?

ಎಂಬ ಪುಸ್ತಕವನ್ನು ತರಿಸಿ ಈ ವಿಚಾರವನ್ನು ತಿಳಿಯಿರಿ. ಈ ಪುಸ್ತಕದಲ್ಲಿ ವಿವರಿಸಿರುವ ಸಂಭಾಷಣಾ ಮಾರ್ಗಗಳನ್ನು ಅನುಸರಿಸಿ, ನಿಮ್ಮ ಸತ್ತಿರುವ ಬಂಧುಗಳೊಡನೆ ಮಾತನಾಡಿ ! ಇದರ ಮಾಹಿತಿಯು ಈ ಪತ್ರಿಕೆಯಲ್ಲಯೇ ಪ್ರಕಟನಮಾಡಿರುತ್ತೆ

ಬಾಲಚಂದ್ರ

ದಕ್ಷಿಣ ಕನ್ನಡ ಜಿಲ್ಲೆಯ ಮೂಲ ಶಾಲಾಧ್ಯಾಪಕರ ಸಂಘದಿಂದ ಹೊರಡುವ ಉತ್ತಮವರ್ಗದ ಮಾಸಪತ್ರಿಕೆ. ವಾರ್ಷಿಕ ಚಂದ ೧ ರೂಪಾಯಿ.

ವಿಳಾಸ— "ಬಾಲಚಂದ್ರ" ಆಫೀಸು,
ಉಡುಪಿ.